janathavani@mac.com , www.janathavani.com 08192 254736 91642 99999

# ಜನತಾ ವಾಣಿ

ಸಂಪಾದಕರು : ಎಂ.ಎಸ್. ವಿಕಾಸ್ ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಶನಿವಾರ, ಜನವರಿ 20, 2024, ದಾವಣಗೆರೆ, ಪುಟ : 6 ರೂ : 5, ಸಂಪುಟ : 50 ಸಂಚಿಕೆ : 248 RNI : 27369/75

## ಮಾರ್ಚ್ ಮೊದಲ ವಾರದಲ್ಲಿ ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟ ಸಾಧ್ಯತೆ

ಬೆಂಗಳೂರು, ಜ. 19 - ಬರುವ ಮಾರ್ಚ್ ಮೊದಲ ವಾರ ಲೋಕಸಭಾ ಚುನಾವಣೆ ದಿನಾಂಕಗಳು ಪ್ರಕಟವಾಗುವ ಸಾಧ್ಯತೆ ಇದೆ.

ಕೇಂದ್ರ ಚುನಾವಣಾ ಆಯೋಗ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಏಳರಿಂದ ಒಂಭತ್ತು ಹಂತಗಳಲ್ಲಿ ಲೋಕಸಭೆಯ 543 ಸ್ಥಾನಗಳಿಗೆ ಚುನಾವಣೆ ನಡೆಸಲು ಸಿದ್ಧತೆ ಮಾಡಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ನಿನ್ನೆ ನಡೆದ ಸಂಪುಟ ಸಭೆಯಲ್ಲಿ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಮಾಹಿತಿ ನೀಡಿ, ಫೆಬ್ರವರಿ 23ರ ಒಳಗೆ 2024-25ರ ಮುಂಗಡ ಪತ್ರಕ್ಕೆ ಅನುಮತಿ ಪಡೆದುಕೊಳ್ಳಬೇಕು ಎಂದಿದ್ದಾರೆ.




ಚುನಾವಣಾ ಆಯೋಗವು ಎಲ್ಲಾ ರಾಜ್ಯಗಳಿಗೆ ಮಾಹಿತಿ ನೀಡಿ, ಫೆಬ್ರವರಿ ಮೂರನೇ ವಾರದ ವೇಳೆಗೆ ಮುಂಗಡ ಪತ್ರ ಮಂಡಿಸಿ ಅನುಮೋದನೆ ಪಡೆದುಕೊಳ್ಳುವಂತೆ ಮತ್ತು ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ಗಡುವು ನೀಡಿದೆ.

ಆಯೋಗದ ಸಲಹೆಯಂತೆ ನಿನ್ನೆ ನಡೆದ ಸಂಪುಟ ಸಭೆಯಲ್ಲಿ ಫೆಬ್ರವರಿ 12 ರಂದು ವಿಧಾನಮಂಡಲದ ಅಧಿವೇಶನ ಕರೆದು 16ಕ್ಕೆ ಬಜೆಟ್ ಮಂಡನೆ ಮಾಡುವ ತೀರ್ಮಾನವನ್ನು ಸರ್ಕಾರ ಕೈಗೊಂಡಿತು. ಸರ್ಕಾರಕ್ಕೆ ಬಂದಿರುವ ಉನ್ನತ ಮೂಲಗಳ ಮಾಹಿತಿ ಪ್ರಕಾರ ಕರ್ನಾಟಕದ 28 ಲೋಕಸಭಾ ಸ್ಥಾನಗಳಿಗೆ ಈ ಬಾರಿಯೂ ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ.

ಏಪ್ರಿಲ್ ಅಂತ್ಯದ ವೇಳೆಗೆ ನಮ್ಮಲ್ಲಿ ಮತದಾನ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ, ಆದರೆ ಮತ ಎಣಿಕೆ ಮೇ ಮೂರನೇ ವಾರದಲ್ಲಿ ನಡೆಯುತ್ತದೆ ಎಂಬ ಮಾಹಿತಿ ಲಭ್ಯವಾಗಿದೆ. ಚುನಾವಣಾ ಆಯೋಗದ ಸಲಹೆಯಂತೆ ಜನವರಿ ಮೂರನೇ ವಾರದ ನಂತರ ಸರ್ಕಾರ ಯಾವುದೇ ವರ್ಗಾವರ್ಗಿಗಳನ್ನು ಮಾಡುವಂತಿಲ್ಲ. ಆ ನಂತರ ಆಯೋಗ (2ನೇ ಪುಟಕ್ಕೆ)

## ಡಿಡಿಸಿಸಿ ಬ್ಯಾಂಕ್ : ಜೆಆರ್‌ಎಸ್, ವೇಣುಗೋಪಾಲ ರೆಡ್ಡಿ ಪುನರಾಯ್ಕೆ

ದಾವಣಗೆರೆ,ಜ.19- ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಆಡಳಿತ ಮಂಡಳಿಗೆ ಇದೇ ದಿನಾಂಕ 25ರಂದು ಚುನಾವಣೆ ನಡೆಯಲಿದ್ದು, ಒಟ್ಟು 13 ಸ್ಥಾನಗಳ ಪೈಕಿ ಸಹಕಾರಿ ಧುರೀಣ ಜೆ.ಆರ್. ಷಣ್ಮುಖಪ್ಪ ಮತ್ತು ಜೆ.ಎಸ್.ವೇಣುಗೋಪಾಲ ರೆಡ್ಡಿ ಇಬ್ಬರೂ ಅವಿರೋಧ ಆಯ್ಕೆಯಾಗಿದ್ದಾರೆ.

ಉಳಿದಂತೆ, 11 ಸ್ಥಾನಗಳಿಗೆ ಚುನಾವಣೆ ನಡೆಯಬೇಕಿದೆ. ಉಮೇದುವಾರಿಕೆ ಅರ್ಜಿ ಪರಿಶೀಲನೆ ಇಂದು ನಡೆದಿದ್ದು, ನಾಮಪತ್ರ ಸಲ್ಲಿಸಲ್ಪಟ್ಟ ಎಲ್ಲಾ 95 ಅರ್ಜಿಗಳೂ ಪುರಸ್ಕೃತಗೊಂಡಿವೆ. ನಾಳೆ ದಿನಾಂಕ 20ರ ಶನಿವಾರ ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನವಾಗಿದೆ.

ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಹೊಂದಿರುವ 'ಬಿ' ವರ್ಗದ 1 ಸ್ಥಾನಕ್ಕೆ ಮೂವರು ಸಲ್ಲಿಸಿದ್ದ ನಾಮಪತ್ರಗಳ ಪೈಕಿ ದಾವಣಗೆರೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಶ್ರೀಮತಿ ರೇಖಾ ಜೆ.ಆರ್. ಷಣ್ಮುಖಪ್ಪ ಮತ್ತು ದಾವಣಗೆರೆ ಅಡಿಕೆ ಅಭಿವೃದ್ಧಿ ಪರಿಷ್ಕರಣಾ - ಮಾರಾಟ ಸಹಕಾರ ಸಂಘದ ಬಿ.ಕೆ. ಶಿವಕುಮಾರ್ ತಮ್ಮ ನಾಮಪತ್ರಗಳನ್ನು ವಾಪಸ್ ಪಡೆದ ಹಿನ್ನೆಲೆಯಲ್ಲಿ ಚನ್ನಗಿರಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಜೆ.ಆರ್. ಷಣ್ಮುಖಪ್ಪ (2ನೇ ಪುಟಕ್ಕೆ)


|| ಶ್ರೀ ಬಸವೇಶ್ವರ ಸ್ವಾಮಿ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಜಿಲ್ಲೆ, ತಾಲ್ಲೂಕು, ಹೊಸಬೆಳವನೂರು ಗ್ರಾಮದ ವಾಸಿಯಾದ ದಿ|| ಶ್ರೀಮತಿ ಸರ್ವಮಂಗಳಮ್ಮ, ಹಂಪನೂರು ದಿ|| ಶ್ರೀ ಚಂದ್ರಶೇಖರಪ್ಪ ಇವರ ಮಗನಾದ ಶ್ರೀ ಹೆಚ್.ಎಸ್. ಚನ್ನಬಸಪ್ಪ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 12-01-2024ನೇ ಶುಕ್ರವಾರ ರಾತ್ರಿ 9-40 ಕ್ಕೆ ನನ್ನ ಸಹೋದರ ಶ್ರೀ ಹೆಚ್.ಎಸ್. ಮಂಜುನಾಥ ಇವರ ಧರ್ಮಪತ್ನಿ

**ಶರಣೆ ಶ್ರೀಮತಿ ಶಕುಂತಲಮ್ಮನವರು**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ : 20-01-2024ನೇ ಶನಿವಾರ ಬೆಳಿಗ್ಗೆ 10.30 ಕ್ಕೆ ಶ್ರೀ ಬಸವೇಶ್ವರ ಸಮುದಾಯ ಭವನ, ಹೊಸ ಬೆಳವನೂರು ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಶ್ರೀ ಹೆಚ್.ಎಸ್. ಮಂಜುನಾಥ ಮತ್ತು ಮಕ್ಕಳು, ಮೊಮ್ಮಕ್ಕಳು ಮತ್ತು ಅಳಿಯಂದಿರು, ಸಹೋದರರು, ಸಹೋದರಿಯರು ಮತ್ತು ಹಂಪನೂರು ದಾನಜ್ಜರ ವಂಶಸ್ಥರು, ಬೆಳವನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
ಮೊ. : 9480566859, 9448840348

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ, ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.











ಉತ್ತರದಿಂದ ದಕ್ಷಿಣಕ್ಕೆ, ಪೂರ್ವದಿಂದ ಪಶ್ಚಿಮಕ್ಕೆ, ಇಲ್ಲಿಗೆ ಅವಳು ಬರುತ್ತಾಳೆ #ShowTheWay

ಬ್ರೈಡ್ಸ್ ಆಫ್ ಇಂಡಿಯಾ ಸಂಗ್ರಹಣೆಯೊಂದಿಗೆ ವಧುವಿನ ಮ್ಯಾಜಿಕ್ ಅನ್ನು ಅನುಭವಿಸಿ. ಭಾರತದ ವೈವಿಧ್ಯಮಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲು ಉತ್ತಮವಾಗಿ ರಚಿಸಲಾದ ಚಿನ್ನ, ವಜ್ರ, ಪೋಲ್ಕಿ, ಅತ್ಯಮೂಲ್ಯವಾದ ಜೆಮ್‌ಸ್ಟೋನ್ ಮತ್ತು ಅದಕ್ಕೂ ಮೀರಿದ ವಧುವಿನ ಆಭರಣದ ತುಣುಕುಗಳ ಅತ್ಯದ್ಭುತ ಮತ್ತು ಆಕರ್ಷಕ ಸಂಗ್ರಹಗಳನ್ನು ಒಳಗೊಂಡಿದೆ.

ದಾವಣಗೆರೆ, ಮಂಡಿಪೇಟೆ. 08192 231916, 7994435487

BUY ONLINE AT: malabargoldanddiamonds.com

INDIA | AUSTRALIA | CANADA | UK | USA | SINGAPORE | MALAYSIA | UAE | QATAR | KSA | OMAN | KUWAIT | BAHRAIN

*Conditions apply



# ಹೃದಯಪೂರ್ವಕ ಧನ್ಯವಾದಗಳು



ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ 24ನೇ ಮಹಾಧಿವೇಶನದಲ್ಲಿ ಕೈಕೊಂಡ ನಿರ್ಣಯ ಹಾಗೂ ಮನವಿಯ ಮೇರೆಗೆ 12ನೇ ಶತಮಾನದಲ್ಲೇ ಅನುಭವ ಮಂಟಪದ ಮೂಲಕ ಸಂಸತ್ತಿನ ಮತ್ತು ಸಮ-ಸಮಾಜದ ಪರಿಕಲ್ಪನೆಯನ್ನು ಜಗತ್ತಿಗೆ ಕಟ್ಟಿಕೊಟ್ಟ ಮಹಾನ್ ಮಾನವತಾವಾದಿ, ಸಾಮಾಜಿಕ ಕ್ರಾಂತಿಯ ಹರಿಕಾರ

**ಜಗಜ್ಯೋತಿ ಬಸವಣ್ಣ** ನವರನ್ನು

**ಕರ್ನಾಟಕದ ಸಾಂಸ್ಕೃತಿಕ ನಾಯಕ** ಎಂದು

ಘೋಷಿಸಿದ ಕರ್ನಾಟಕದ ಮುಖ್ಯಮಂತ್ರಿ

**ಸನ್ಮಾನ್ಯ ಶ್ರೀ ಸಿದ್ದರಾಮಯ್ಯ** ಹಾಗೂ

ಉಪಮುಖ್ಯಮಂತ್ರಿ **ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್**

ಮತ್ತು ಸಂಪುಟದ ಎಲ್ಲ ಮಾನ್ಯ ಸಚಿವರುಗಳಿಗೆ

**ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ**


**ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತದೆ.**







ಡಾ. ಶಾಮನೂರು ಶಿವಶಂಕರಪ್ಪ ಶಾಸಕರು
ಅಧ್ಯಕ್ಷರು, ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾ (ರಿ.)






ಶ್ರೀ ಈಶ್ವರ್ ಖಂಡ್ರೆ ಸಚಿವರು
ಮಹಾ ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾ (ರಿ.)

**ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾ (ರಿ.), ಬೆಂಗಳೂರು**

# ರಾಗಿ ಹಣ ಪಾವತಿಗಾಗಿ ಆಗ್ರಹಿಸಿ ರೈತರ ಅಹೋರಾತ್ರಿ ಧರಣಿ





**ಜಗಳೂರು**

ಜಗಳೂರು, ಜ.19- ಪಟ್ಟಣದ ಎಪಿಎಂಸಿ ಆವರಣದಲ್ಲಿ ರಾಗಿ ಹಣ ಪಾವತಿಗಾಗಿ ಒತ್ತಾಯಿಸಿ, ಫಲಾನುಭವಿ ರೈತರು ಸ್ಥಳದಲ್ಲಿಯೇ ಸೌದೆ ಒಲೆಯಲ್ಲಿ ಅಡುಗೆ ತಯಾರಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ.

ರೈತ ಸಂಘಟನೆ ಮುಖಂಡ ಆಕನೂರು ನಿಂಗಪ್ಪ ಮಾತನಾಡಿ, ಕಳೆದ ವರ್ಷದಲ್ಲಿ ರಾಗಿ ಖರೀದಿ ಕೇಂದ್ರದಲ್ಲಿ ನಡೆದ ಅವ್ಯವಹಾರದಿಂದ ಹಣ ಪಾವತಿಯಿಂದ ವಂಚಿತರಾಗಿರುವ ರಾಗಿ ಬೆಳೆಗಾರರಿಗೆ ಹಂತ ಹಂತವಾಗಿ ಹಣ ಪಾವತಿಸಲು ಸರ್ಕಾರ ಕ್ರಮಕೈಗೊಳ್ಳಲಾಗಿತ್ತು. ಆಹಾರ ನಿಗಮದ ಅಧಿಕಾರಿಗಳು ನೋಟಿಸ್‌ಗೆ ಸ್ಪಂದಿಸಿ, ತಾಂತ್ರಿಕ ದೋಷ ಸರಿಪಡಿಸಿ, ವಾರದೊಳಗೆ ಹಣ ಪಾವತಿಸಲು ಒಪ್ಪಿಕೊಂಡಿದ್ದರು. ಆದರೆ, ಇದುವರೆಗೂ 500 ಕ್ಕೂ ಅಧಿಕ ರೈತರಿಗೆ ಯಾವುದೇ ಬಿಡಿಗಾಸು ಹಣ ಪಾವತಿಯಾಗಿಲ್ಲ ಎಂದರು.

ರೈತ ಸಂಘಟನೆ ಮುಖಂಡ ಮಾರುತಿ ಮಾತನಾಡಿ, ತಾಲ್ಲೂಕು ಪ್ರಸಕ್ತ ಸಾಲಿನಲ್ಲಿ ಬರ ಛಾಯೆಗೆ ಸಿಲುಕಿ ಯಾವುದೇ ಬೆಳೆಗಳು ಕೈಗೆ ಸಿಗದೇ ಕಂಗಾಲಾಗಿರುವ ರೈತರಿಗೆ ಕಳೆದ ವರ್ಷದ ರಾಗಿ ಹಣವೂ ಇಲ್ಲದೇ ಗಾಯದ ಮೇಲೆ ಬರೆ ಎಳೆದಂತಾಗಿ ಆರ್ಥಿಕ ಸಂಕಷ್ಟ ಎದುರಾಗಿದೆ. ಹಣ ಪಾವತಿ ಮಾಡುವವರೆಗೂ ಅನಿರ್ದಿಷ್ಟಾವಧಿ ಸ್ಥಳದಲ್ಲಿಯೇ ಅಡುಗೆ ತಯಾರಿಸಿಕೊಂಡು ಊಟ, ತಿಂಡಿ ಸೇವಿಸುವ ಮೂಲಕ ಅಹೋರಾತ್ರಿ ಧರಣಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ರೈತರ ಪ್ರತಿಭಟನೆ ಕುರಿತು ಆಹಾರ ನಿಗಮದ ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರಲಾಗಿದ್ದು, ಸ್ಥಳಕ್ಕೆ ಆಗಮಿಸಿ ಸಮಸ್ಯೆ ಪರಿಹರಿಸಲು ಸೂಚಿಸಲಾಗಿದೆ ಎಂದು ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ ಪ್ರತಿಕ್ರಿಯೆ ನೀಡಿದರು.

ಈ ಸಂದರ್ಭದಲ್ಲಿ ರಾಗಿ ಬೆಳೆಗಾರರಾದ ಮಂಜಣ್ಣ, ಸಿದ್ದಪ್ಪ, ಮಾದಿಹಳ್ಳಿ ಪರಮೇಶ್ವರಪ್ಪ, ಶರಣಪ್ಪ, ಮರಿಕುಂಟೆ ಮಹೇಶ್, ಬಾಬು, ಉರ್ಲುಕಟ್ಟೆ ರೇವಣ್ಣ, ರಸ್ತೆ ಮಾಚಿಕೆರೆ ಸ್ವಾಮಿ, ಅಜ್ಜಣ್ಣ ಮುಂತಾದವರು ಇದ್ದರು.

# ಮಕ್ಕಳಿಗೆ ಚಿತ್ರ ವಿಚಿತ್ರ ಹಿಂಸೆ

## 'ಅನಾಥಾಶ್ರಮ'ದ ಐವರು ಮಹಿಳೆಯರ ವಿರುದ್ಧ ಎಫ್‌ಐಆರ್

ಇಂದೋರ್, ಜ. 19 – ಮಧ್ಯಪ್ರದೇಶದ ಇಂದೋರ್‌ನ ಅನಾಥಾಶ್ರಮದಲ್ಲಿದ್ದ ಅಪ್ರಾಪ್ತ ಹೆಣ್ಣು ಮಕ್ಕಳನ್ನು ಹಿಂಸೆಗೆ ಗುರಿಪಡಿಸಿದ ಹಾಗೂ ಬಿಸಿ ಇಕ್ಕಳದಿಂದ ಬರೆ ಹಾಕಿದ ಘಟನೆಗಳು ಬೆಳಕಿಗೆ ಬಂದಿವೆ. ಈ ಹಿನ್ನೆಲೆಯಲ್ಲಿ ಅನಾಥಾಶ್ರಮವನ್ನು ಮುಚ್ಚಲಾಗಿದ್ದು, ಐವರು ಮಹಿಳೆಯರ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಹೆಣ್ಣು ಮಕ್ಕಳಿಗೆ ಶಿಕ್ಷೆಯ ಹೆಸರಿನಲ್ಲಿ ಹಿಂಸಾಚಾರ ನೀಡಲಾಗುತ್ತಿತ್ತು. ಮಕ್ಕಳ ಕಲ್ಯಾಣ ಸಮಿತಿಯ ಎದುರು ಬಾಲಕಿಯರು ತಮಗೆ ನೀಡಲಾಗುತ್ತಿದ್ದ ಹಿಂಸೆಯ ವಿಷಯ ತಿಳಿಸಿದ್ದಾರೆ.

ಆದರೆ, ಈ ಸಂಸ್ಥೆಯು ಅನಾಥಾಶ್ರಮವಲ್ಲ, ಇದು ವಸತಿ ನಿಲಯ. ಸರ್ಕಾರ ಅಕ್ರಮವಾಗಿ ಮಕ್ಕಳನ್ನು ವಶಕ್ಕೆ ತೆಗೆದುಕೊಂಡಿದೆ ಎಂದು ಈ ಸಂಸ್ಥೆ ನಡೆಸುತ್ತಿದ್ದ ಸರ್ಕಾರೇತರ ಸಂಘಟನೆ ಆರೋಪಿಸಿದೆ.

'ವಾತ್ಸಲ್ಯಪುರಂ' ಎಂಬ ಹೆಸರಿನ ಈ ಕೇಂದ್ರ ವಿಜಯನಗರ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಅಕ್ರಮವಾಗಿ ಈ ಸಂಸ್ಥೆ ನಡೆಸಲಾಗುತ್ತಿದೆ ಎಂದು ಆರೋಪಿಸಲಾಗಿದ್ದು, ಅದರಲ್ಲಿದ್ದ ನಾಲ್ಕರಿಂದ 14 ವರ್ಷದ ಹೆಣ್ಣು ಮಕ್ಕಳನ್ನು ಸರ್ಕಾರಿ ಸಂಸ್ಥೆಗೆ ಕಳಿಸಲಾಗಿದೆ.

ಕೊಳಕಾಗಿರುವ ಬಟ್ಟೆ ಧರಿಸಿದ ಕಾರಣಕ್ಕಾಗಿ ನಾಲ್ಕು ವರ್ಷದ ಬಾಲಕಿಯನ್ನು ಥಳಿಸಲಾಗಿತ್ತು, ಹಲವು ಗಂಟೆ ಕಾಲ ಸ್ನಾನದ ಕೋಣೆಯಲ್ಲಿ ಕೂಡಿ ಹಾಕಲಾಗಿತ್ತು ಹಾಗೂ ಎರಡು ದಿನ ಊಟ ಕೊಟ್ಟಿರಲಿಲ್ಲ ಎಂದು ಜನವರಿ 17ರಂದು ದಾಖಲಿಸಲಾಗಿರುವ ಎಫ್.ಐ.ಆರ್.ನಲ್ಲಿ ತಿಳಿಸಲಾಗಿದೆ. ಮಕ್ಕಳನ್ನು ತಲೆ ಕೆಳಗಾಗಿ ನೇತು ಹಾಕಲಾಗುತ್ತಿತ್ತು ಹಾಗೂ ಕೆಂಡದಲ್ಲಿ ಕೆಂಪು ಮೆಣಸು ಹಾಕಿ ಹೊಗೆ ಕುಡಿಸಲಾಗುತ್ತಿತ್ತು ಎಂದೂ ತಿಳಿಸಲಾಗಿದೆ.

ಎರಡು ಮಕ್ಕಳಿಗೆ ಇಕ್ಕಳ ಕಾಯಿಸಿ ಬರೆ ಹಾಕಲಾಗಿತ್ತು. ಇನ್ನೊಂದು ಮಗುವನ್ನು ಇತರೆ ಮಕ್ಕಳ ಎದುರು ವಿವಸ್ತ್ರಗೊಳಿಸಲಾಗಿತ್ತು ಎಂದು ಆರೋಪಿಸಲಾಗಿದೆ.

ಜೈನ್ ವೆಲ್‌ಫೇರ್ ಸೊಸೈಟಿಯು ಈ ಸಂಸ್ಥೆ ನಡೆಸುತ್ತಿತ್ತು. ಸಂಸ್ಥೆ ತನ್ನ ಮೇಲಿನ ಆರೋಪವನ್ನು ತಳ್ಳಿ ಹಾಕಿದ್ದು, ಹೈಕೋರ್ಟ್‌ನ ಇಂದೋರ್ ಪೀಠದಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ದಾಖಲಿಸಿದೆ.

ಈ ಬಗ್ಗೆ ಮಾತನಾಡಿರುವ ಸಂಸ್ಥೆಯ ಪರ ವಕೀಲ ವಿಭೋರ್ ಖಂಡೇಲ್ವಾಲ್, ವಾತ್ಸಲ್ಯಪುರಂ ಅನಾಥಾಶ್ರಮವಲ್ಲ. ಅದು ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬಗಳಿಗೆ ನಡೆಸಲಾಗುತ್ತಿದ್ದ ವಿದ್ಯಾರ್ಥಿನಿಲಯವಾಗಿದೆ. ವಾರ್ಷಿಕ ಕೇವಲ 5 ರೂ. ಶುಲ್ಕ ಪಡೆಯಲಾಗುತ್ತಿತ್ತು ಎಂದಿದ್ದಾರೆ.

ಸರ್ಕಾರ ಅಕ್ರಮವಾಗಿ ಮಕ್ಕಳನ್ನು ಬೇರೆಡೆ ರವಾನಿಸಿದೆ. ಮಕ್ಕಳನ್ನು ವಿದ್ಯಾರ್ಥಿ ನಿಲಯ ಇಲ್ಲವೇ ಪೋಷಕರಿಗೆ ಮರಳಿಸುವಂತೆ ಹೇಬಿಯಸ್ ಕಾರ್ಪಸ್ ಅರ್ಜಿ ದಾಖಲಿಸಲಾಗಿದೆ ಎಂದು ಖಂಡೇಲ್ವಾಲ್ ತಿಳಿಸಿದ್ದಾರೆ.

## ರಾಮ ಮೂರ್ತಿಯ ಅನಾವರಣ



ಅಯೋಧ್ಯೆ, ಜ. 19 – ಅಯೋಧ್ಯೆ ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಗೆ ಮೂರು ದಿನ ಇರುವಂತೆಯೇ, ಬಾಲ ರಾಮ ದೇವರ ಮೂರ್ತಿಯನ್ನು ಅನಾವರಣಗೊಳಿಸಲಾಗಿದೆ. ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರು ರೂಪಿಸಿರುವ ಮೂರ್ತಿಯನ್ನು ಬುಧವಾರ ರಾತ್ರಿ ದೇವಾಲಯಕ್ಕೆ ತರಲಾಗಿತ್ತು. ಮಂತ್ರಘೋಷಗಳ ನಡುವೆ ಮೂರ್ತಿಯನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿತ್ತು.

## ಜ.22 ರಂದು ರಜೆ ಘೋಷಣೆಗೆ ಒತ್ತಾಯ

ಬೆಂಗಳೂರು, ಜ. 19 - ಅಯೋಧ್ಯೆಯ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಪೂಜಾ ವಿಧಿಗಳನ್ನು ಸಾರ್ವಜನಿಕರು ವೀಕ್ಷಿಸಲು ಅವಕಾಶವಾಗುವಂತೆ ರಾಜ್ಯ ಸರ್ಕಾರ ಜನವರಿ 22 ರಂದು ರಜೆ ಘೋಷಣೆ ಮಾಡುವಂತೆ ಬಿಜೆಪಿ ಆಗ್ರಹಿಸಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸರ್ಕಾರ ಈಗಾಗಲೇ ಅರ್ಧ ದಿನ ರಜೆ ಘೋಷಣೆ ಮಾಡಿದೆ. ರಾಷ್ಟ್ರದ ಹಲವು ರಾಜ್ಯ ಸರ್ಕಾರಗಳೂ ಅಂದು ರಜೆ ಘೋಷಿಸಿವೆ ಎಂದರು. ಶ್ರೀರಾಮ ಲಲ್ಲಾ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ವೀಕ್ಷಿಸಲು ಅನುಕೂಲ ಮಾಡಿಕೊಡುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದ್ದಾರೆ.

## ಉದ್ಯೋಗ ಮೇಳಕ್ಕಾಗಿ ಸಚಿವರು ಅಧಿಕಾರಿಗಳ ತಂಡ ರಚನೆ

ಬೆಂಗಳೂರು, ಜ. 19 - ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸುವ ಹಾಗೂ ನಿರುದ್ಯೋಗ ಸಮಸ್ಯೆ ಬಗೆಹರಿಸಿ, ಯುವಜನರಿಗೆ ಉದ್ಯೋಗ ಕಲ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು ಮತ್ತು ಅಧಿಕಾರಿಗಳ ತಂಡ ರಚಿಸಿದ್ದಾರೆ. ಯಾವ ಇಲಾಖೆಯಲ್ಲಿ ಉದ್ಯೋಗ ಸೃಷ್ಟಿ ಮಾಡಬಹುದು ಹಾಗೂ ತಮ್ಮ ಪ್ರಭಾವದಿಂದ ಖಾಸಗಿ ಮತ್ತು ಕೇಂದ್ರದ ಉದ್ಯಮಗಳಲ್ಲಿ ರಾಜ್ಯದ ಯುವಜನತೆಗೆ ಉದ್ಯೋಗ ಕಲ್ಪಿಸುವ ಸಾಧ್ಯತೆಗಳನ್ನು ಈ ತಂಡ ಕಂಡುಕೊಳ್ಳಲಿದೆ.

ವೈದ್ಯಕೀಯ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಸಮಿತಿ ಅಧ್ಯಕ್ಷರಾಗಿದ್ದು, ಸಚಿವರಾದ ಎಂ.ಬಿ. ಪಾಟೀಲ್, ಹೆಚ್.ಕೆ.ಪಾಟೀಲ್, ಡಾ.ಎಂ.ಸಿ. ಸುಧಾಕರ್, ದಿನೇಶ್ ಗುಂಡೂ ರಾವ್, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಡಿ. ನಾಗೇಂದ್ರ ಹಾಗೂ ಈ ಸಚಿವರ ಇಲಾಖೆಗೆ ಸೇರಿದ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು ತಂಡದ ಸದಸ್ಯರಾಗಿರುತ್ತಾರೆ.

ತಂಡವು ರಾಜ್ಯ, ಪ್ರಾದೇಶಿಕ ಹಾಗೂ ಜಿಲ್ಲಾ ಮಟ್ಟದಲ್ಲಿ ಬೃಹತ್, ಸಣ್ಣ ಕೈಗಾರಿಕೆ, ಸಾಫ್ಟ್‌ವೇರ್ ಉದ್ಯಮಿಗಳ ಸಹಯೋಗದೊಂದಿಗೆ ಉದ್ಯೋಗ ಮೇಳಗಳನ್ನು ಆಯೋಜನೆ ಮಾಡಲಿದೆ.

ಉದ್ಯೋಗ ಮೇಳ ನಡೆಸುವುದರಿಂದ ಐಟಿ-ಬಿಟಿ, ಹೋಟೆಲ್, ಉತ್ಪಾದನಾ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಮೀಣ ಭಾಗದ ಯುವಕ-ಯುವತಿಯರಿಗೆ ಹೆಚ್ಚಿನ ಅವಕಾಶ ಸಿಗಲಿದೆ.

# ಸಂಘಟನೆ ಹೆಸರು ದುರ್ಬಳಕೆ : ಕಾನೂನು ಕ್ರಮಕ್ಕೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ದೂರು ಸಲ್ಲಿಕೆ



ಮಲೇಬೆನ್ನೂರು, ಜ.19- ಸಂಘಟನೆ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಾ ಸಾರ್ವಜನಿಕರಿಗೆ ವಂಚಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ.ಕೃಷ್ಣಪ್ಪ ಸ್ಥಾಪಿತ) ಕಾರ್ಯಕರ್ತರು ನಿನ್ನೆ ಮಲೇಬೆನ್ನೂರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದರು.

ಈ ವೇಳೆ ಮಾತನಾಡಿದ ಕದಸಂಸ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಅವರು 1974ರಲ್ಲಿ ಪ್ರೊ. ಬಿ.ಕೃಷ್ಣಪ್ಪನವರು ಈ ಸಂಘಟನೆಯನ್ನು ಭದ್ರಾವತಿಯಲ್ಲಿ ಸ್ಥಾಪಿಸಿದ್ದು, ದಿನಾಂಕ 25.01.1975 ರಂದು ಶಿವಮೊಗ್ಗ ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಸಹಕಾರಿ ಸಂಘಗಳ ಕಾಯ್ದೆಯಡಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಎಂಬ ಹೆಸರಿನಲ್ಲಿ ನೊಂದಣಿ (ಸಂಖ್ಯೆ: ಎಸ್‌ಎಂಜಿ. ಎಸ್47/74-75) ಮಾಡಿಸಿ, ರಾಜ್ಯಾದ್ಯಂತ ವಿಸ್ತರಿಸಿದ್ದಾರೆ.

ಹೀಗಿದ್ದಾಗ ಕೆಲವರು ನಮ್ಮ ಸಮಿತಿ ಹೆಸರನ್ನು ದುರ್ಬಳಕೆ ಮಾಡಿಕೊಳ್ಳತೊಡಗಿದ್ದರಿಂದ ನಮ್ಮ ಮೂಲ ಸಂಘಟನೆ ಹೆಸರಿನೊಂದಿಗೆ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಎಂಬುದನ್ನು ನಿಯಮಾನುಸಾರ ಸೇರ್ಪಡೆ ಮಾಡಿಕೊಂಡಿ ದ್ದಲ್ಲದೇ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದ ಕೆಲವರ ವಿರುದ್ಧ ನಮ್ಮ ಸಮಿತಿಯ ರಾಜ್ಯ ಸಂಚಾಲಕ ಎಂ. ಗುರುಮೂರ್ತಿಯವರು ಭದ್ರಾವತಿಯ ನಾಲ್ಕನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ದಲ್ಲಿ ಅಸಲು ದಾವೆ ದಾಖಲು ಮಾಡಿದ್ದರು.

ಸುದೀರ್ಘ ವಿಚಾರಣೆ ನಂತರ ನ್ಯಾಯಾಲಯವು ದಿನಾಂಕ 24/03/2021 ರಂದು ನಮ್ಮದೆ ನಿಜವಾದ, ಮೂಲ ಸಮಿತಿಯಾಗಿದೆ ಎಂದು ತೀರ್ಪು ನೀಡಿದ್ದು, ಪ್ರತಿವಾದಿಗಳು ಪ್ರೊ.ಕೃಷ್ಣಪ್ಪ ಸ್ಥಾಪಿತ ಡಿಎಸ್‌ಎಸ್ ಹೆಸರು ಬಳಕೆ ಮಾಡದಂತೆ ಮತ್ತು ಆ ಹೆಸರಿನಲ್ಲಿ ಯಾವುದೇ ಕಾರ್ಯಕ್ರಮ ಆಯೋಜಿಸದಂತೆ, ಸಂಘಟನೆಯ ಪದಾಧಿಕಾರಿಗಳೆಂದು ಹೇಳಿಕೊಳ್ಳದಂತೆ ಶಾಶ್ವತ ನಿರ್ಬಂಧಕಾಜ್ಞೆ ನೀಡಿ ಆದೇಶಿಸಿದೆ. ಈ ಆದೇಶದ ವಿರುದ್ಧ ಪ್ರತಿವಾದಿಗಳು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರೂ ಅದು ಇದುವರೆಗೂ ಇತ್ಯರ್ಥವಾಗಿರುವುದಿಲ್ಲ. ಆದರೆ, ಕೆಲವರು 'ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ), ಮಹಾತ್ಮ ಪ್ರೊ.ಕೃಷ್ಣಪ್ಪ ಸ್ಥಾಪಿತ ರಿ.ನಂ.386/2020-21' ಎಂದು ಕಾನೂನು ಬಾಹಿರವಾಗಿ ಲೆಟರ್ ಹೆಡ್ ಮಾಡಿಸಿಕೊಂಡು ಜನರನ್ನು, ಅಧಿಕಾರಿಗಳನ್ನು, ಜನಪ್ರತಿನಿಧಿಗಳನ್ನು ವಂಚಿಸುತ್ತಿದ್ದಾರೆ.

ಸ್ವತಃ ಪ್ರೊ.ಬಿ.ಕೃಷ್ಣಪ್ಪನವರು ಸ್ಥಾಪಿಸಿ ನೊಂದಾಯಿಸಿರುವ ನಮ್ಮ ಸಮಿತಿ ಇರುವಾಗಲೂ, ಮುಖ್ಯವಾಗಿ ದಿನಾಂಕ 30.04.1997 ರಂದೇ ಪ್ರೊ.ಬಿ.ಕೃಷ್ಣಪ್ಪನವರು ನಿಧನರಾಗಿದ್ದಾಗ್ಯೂ, 2020-21ರಲ್ಲಿ ನೋಂದಾಯಿಸಿರುವ ಸಮಿತಿಗೆ 'ಮಹಾತ್ಮ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ' ಎಂದು ಬರೆದುಕೊಂಡು ಜನರ ಕಣ್ಣಿಗೆ ಮಣ್ಣೆರಚುತ್ತಿರುವ, ವಂಚಿಸುತ್ತಿ ರುವವರು ಸೇರಿದಂತೆ ಈ ವಂಚನೆಯಲ್ಲಿ ಭಾಗೀದಾರರಾಗಿರುವ ಎಲ್ಲರ ವಿರುದ್ಧ ದೂರು ದಾಖಲಿಸಿಕೊಂಡು ತನಿಖೆ ನಡೆಸಿ, ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಮಹಾಂತೇಶ್ ಅವರು ಆಗ್ರಹಿಸಿದರು.

ಭಾಗ್ಯಮ್ಮ, ಹನುಮಕ್ಕ, ಪುಷ್ಪ, ನಾಗಮ್ಮ, ಶಕುಂತಲ, ನಿರ್ಮಲ, ತಿಮ್ಮಣ್ಣ, ಮಾತಂಗ, ಶೈಲೂ, ಆಲಮ್ಮ, ಮೈಲಮ್ಮ, ಮಲ್ಲಮ್ಮ, ಗಂಗಮ್ಮ, ಹನುಮಂತ, ವೆಂಕಟೇಶ್, ರಂಗನಾಥ ಹಾಗೂ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

# ಚುನಾವಣಾ ವೇಳಾಪಟ್ಟಿ ಪ್ರಕಟ ಸಾಧ್ಯತೆ

**(1ನೇ ಪುಟದಿಂದ)** ತನಗೆ ಬೇಕಾದಂತೆ ಅಧಿಕಾರಿಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ನಿಯೋಜಿಸಿಕೊಳ್ಳಬಹುದು, ಇದರಲ್ಲಿ ಸರ್ಕಾರಕ್ಕೆ ಯಾವುದೇ ಅಧಿಕಾರ ಇರುವುದಿಲ್ಲ. ಮಾರ್ಚ್ ಮೊದಲ ವಾರದಲ್ಲಿ ವೇಳಾಪಟ್ಟಿ ಪ್ರಕಟಗೊಂಡ ನಂತರ ಫಲಿತಾಂಶ ಹಾಗೂ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ನೀತಿ ಸಂಹಿತೆ ಜಾರಿಗೆ ಮುನ್ನ ಶಾಸಕರ ಕ್ಷೇತ್ರಗಳಿಗೆ ಅನುದಾನ ಬಿಡುಗಡೆ ಮಾಡಿ ಪ್ರಮುಖ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲು ಮುಖ್ಯಮಂತ್ರಿ ಅವರು ಪ್ರತಿ ಕ್ಷೇತ್ರಕ್ಕೆ ತಲಾ 25 ಕೋಟಿ ರೂ. ಬಿಡುಗಡೆಗೆ ಮುಂದಾಗಿದ್ದಾರೆ.

17ನೇ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಕರ್ನಾಟಕದ 28 ಕ್ಷೇತ್ರಗಳಿಗೆ ಏಪ್ರಿಲ್ 18 ಮತ್ತು 23 ರಂದು ಎರಡು ಹಂತಗಳಲ್ಲಿ ಮತದಾನ ನಡೆದಿತ್ತು.

ಫಲಿತಾಂಶ ಪ್ರಕಟಗೊಂಡ ನಂತರ ಬಿಜೆಪಿ ಮೊದಲ ಬಾರಿಗೆ 25 ಸ್ಥಾನಗಳಲ್ಲೂ, ಕಾಂಗ್ರೆಸ್, ಜೆಡಿಎಸ್ ಮತ್ತು ಪಕ್ಷೇತರರು ತಲಾ ಒಂದು ಸ್ಥಾನಗಳಲ್ಲಿ ಜಯ ಗಳಿಸಿದ್ದರು.

ಅಂದು ಕುಮಾರಸ್ವಾಮಿ ನೇತೃತ್ವದ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಇತ್ತು, ಅಂದಿನ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಕಾಂಗ್ರೆಸ್‌ನ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ, ಹಿರಿಯ ನಾಯಕರಾದ ಕೆ. ಎಚ್.ಮುನಿಯಪ್ಪ, ವೀರಪ್ಪ ಮೊಯಿಲಿ, ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಬಿಜೆಪಿ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ವಿರುದ್ಧ ಸೋಲನುಭವಿಸಿದ್ದರು.

# ಜೆಆರ್‌ಎಸ್, ವೇಣುಗೋಪಾಲ ರೆಡ್ಡಿ ಪುನರಾಯ್ಕೆ

**(1ನೇ ಪುಟದಿಂದ)** ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹೊಂದಿರುವ 'ಎ' ವರ್ಗದ ಜಗಳೂರು ತಾಲ್ಲೂಕಿನಿಂದ 1 ಸ್ಥಾನಕ್ಕೆ ಸಲ್ಲಿಸಿದ ಉಮೇದುವಾರಿಕೆ ಅರ್ಜಿಗಳ ಪೈಕಿ ಒಬ್ಬರು ತಮ್ಮ ನಾಮಪತ್ರ ವಾಪಸ್ ಪಡೆದ ಕಾರಣ, ಸಿದ್ದಿಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಜೆ.ಎಸ್.ವೇಣುಗೋಪಾಲ ರೆಡ್ಡಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜೆ.ಎಸ್.ವೇಣುಗೋಪಾಲ ರೆಡ್ಡಿ ಮತ್ತು ಜೆ. ಆರ್. ಷಣ್ಮುಖಪ್ಪ ಇಬ್ಬರೂ ಮತ್ತೊಂದು ಅವಧಿಗೆ ಪುನರಾಯ್ಕೆಯಾಗಿದ್ದಾರೆ.

# ಹರಪನಹಳ್ಳಿಯಲ್ಲಿ ಅದ್ದೂರಿ ಅಯ್ಯಪ್ಪ ಸ್ವಾಮಿ ರಥೋತ್ಸವ



ಹರಪನಹಳ್ಳಿ, ಜ.19- ಅಪಾರ ಭಕ್ತ ಸಮೂಹದ ನಡುವೆ ಪಟ್ಟಣದ ಮೇಗಳಪೇಟೆಯ ಸಮೀಪದಲ್ಲಿರುವ ಭಾರತಿ ನಗರದ ಅಯ್ಯಪ್ಪ ಸ್ವಾಮಿ ಸನ್ನಿಧಿಯಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಮೂರನೇ ವರ್ಷದ ರಥೋತ್ಸವ, 15ನೇ ವರ್ಷದ ದೀಪಾರಾಧನೆ, ಮಹಾ ಮಂಗಳಾರತಿ ಹಾಗೂ ಧರ್ಮಸಭೆ ಜರುಗಿತು.

ಪಟ್ಟಣದ ಮೇಗಳಪೇಟೆ ನಿವಾಸಿ ಸುಂಕದಲ್ಲು ಕೊಟ್ರೇಶ್ ಅವರು ಒಂದು ಸಾವಿರದ ಒಂದು ರೂಪಾಯಿಗೆ ಅಯ್ಯಪ್ಪ ಸ್ವಾಮಿಯ ರುದ್ರಾಕ್ಷಿ ಮಾಲೆಯನ್ನು ಮತ್ತು ಭಾರತಿ ನಗರದ ನಿವಾಸಿ ಬಿ.ವೀರೇಶ್ ಆಚಾರಿ ಅವರು ಐದು ಸಾವಿರದ ಒಂದು ನೂರಾ ಒಂದು ರೂಪಾಯಿಗೆ ಪಟಾಕ್ಷಿಯನ್ನು ತಮ್ಮದಾಗಿಸಿಕೊಂಡರು.

ತೆಗ್ಗಿನಮಠ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಜಿಗಳು, ಹಡಗಲಿ ಗವಿಸಿದ್ದೇಶ್ವರ ಶಾಖಾಮಠದ ಡಾ.ಹಿರಿಶಾಂತ ವೀರಸ್ವಾಮಿಗಳು, ನೀಲಗುಂದ ಗುಡ್ಡದ ವಿರಕ್ತ ಮಠದ ಚನ್ನಬಸವ ಶಿವಯೋಗಿ ಶ್ರೀಗಳು, ಇಟ್ಟಿಗಿ ಚಿಕ್ಕಮ್ಯಾಗೇರಿಯ ಹಿರೇಮಠದ ಗುರುಶಾಂತವೀರ ಶೀವಾಚಾರ್ಯ ಶ್ರೀಗಳು, ಹಿರೇಮಲ್ಲನಕೆರೆ ವಿರಕ್ತಮಠದ ಅಭಿನವ ಚನ್ನಬಸವ ಮಹಾಸ್ವಾಮಿಗಳು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಅಯ್ಯಪ್ಪಸ್ವಾಮಿ ಪ್ರಶಸ್ತಿಯನ್ನು ಪಿಎಲ್‌ಡಿ ಬ್ಯಾಕ್ ನಿರ್ದೇಶಕ ಪಿ.ಬಿ.ಗೌಡ ಅವರಿಗೆ ನೀಡಿ ಗೌರವಿಸಲಾಯಿತು. ಕಿರಾಣಿ ವರ್ತಕರು ಹಾಗೂ ಸಂಸ್ಕಾರ ಭಾರತಿ ಅಧ್ಯಕ್ಷ ಮಹಾವೀರ ಬಂಡಾರಿ ಅವರು 14ನೇ ವರ್ಷದ ಪ್ರಸಾದ ಸೇವೆ ಮಾಡಿದರು.

ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ, ಪರಸಭೆ ಸದಸ್ಯ ಗೊಂಗಡಿ ನಾಗರಾಜ್, ಪುರಸಭೆ ಮಾಜಿ ಅಧ್ಯಕ್ಷ ಹಾಗೂ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಎಂ. ರಾಜಶೇಖರ್, ಪುರಸಭೆ ಮಾಜಿ ಸದಸ್ಯ ಬಂಗ್ಲಿ ಸೋಮಶೇಖರ್, ನಿವೃತ್ತ ಶಿಕ್ಷಕಿ ದಾನ ಚಿಂತಾಮಣಿ, ಮದರ್ ತೆರೆಸಾ ಪ್ರಶಸ್ತಿ ಪುರಸ್ಕೃತೆ ಹೆಚ್.ಎಂ.ಲಲಿತಮ್ಮ ಸೋಮಲಿಂಗಯ್ಯ, ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ಉಪಾಧ್ಯಕ್ಷ ಕೆ.ಆರ್.ಗಿರೀಶ್, ಕಾರ್ಯದರ್ಶಿ ಕೊಟ್ಗಿ ಈಶಣ್ಣ, ಖಜಾಂಚಿ ಕೌಟಿ ಮಂಜುನಾಥ, ಆಟೋ ಕೌಟಿ ಮಂಜುನಾಥ, ತರಕಾರಿ ವೀರಣ್ಣ, ಪಶು ವೈದ್ಯ ನಾಗರಾಜ್, ದಾವಣಗೆರೆ ನಾಗರಾಜ್, ಶಿಕ್ಷಕರಾದ ಎ.ಎಂ.ಗುಪ್ರಸಾದ್, ಬಣಕಾರ್ ರಾಜಶೇಖರ್, ಪ್ರವೀಣ, ಮೃತ್ಯೋಂಜಯ, ಮಟ್ಟೇರ ಪ್ರಕಾಶ್, ಸತೀಶ್, ಹುಚ್ಚಪ್ಪ, ಪೈಲ್ವನ್ ಸಾದರ್ ಶರತ್‌ಕುಮಾರ್, ಗುರುಸ್ವಾಮಿ ಆರ್.ಬಿ.ಮಂಜುನಾಥ, ವೀರಾಗಾಸೆ ಕಲಾವಿದ ಜಿ.ಮಲ್ಲಿಕಾರ್ಜುನ, ಕಾಶಿಮಠದ ಶಾಸ್ತ್ರಿ ಬಸಯ್ಯ ಇದ್ದರು.

## ಕೊಮಾರನಹಳ್ಳಿ : ಇಂದು ಪಾನಮುಕ್ತ ಸದಸ್ಯರ ನವ ಜೀವನೋತ್ಸವ

ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿ ಗ್ರಾಮದ ಶ್ರೀ ಲಕ್ಷ್ಮಿ ರಂಗನಾಥ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 'ಪಾನಮುಕ್ತ ಸದಸ್ಯರ ನವಜೀವನೋತ್ಸವ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ನಾಗರಾಜ್ ಕಲಾಲ್ ಮತ್ತು ಧರ್ಮಸ್ಥಳ ಯೋಜನೆಯ ಯೋಜನಾಧಿಕಾರಿ ವಸಂತ್ ದೇವಾಡಿಗ ತಿಳಿಸಿದ್ದಾರೆ.


ಉದ್ಘಾಟನೆ : ಎನ್.ಜಿ.ನಾಗನಗೌಡ್ರು. ಅಧ್ಯಕ್ಷತೆ : ಶ್ರೀಮತಿ ಲಕ್ಷ್ಮಿದೇವಿ ಮಂಜುನಾಥ್, ಉಪನ್ಯಾಸ : ಡಿ. ಕೆ.ಸಿದ್ದೇಶ್, ಮುಖ್ಯ ಅತಿಥಿಗಳು : ಹೊನ್ನಾಳಿ ಬಾಬಣ್ಣ, ಎಂ.ಲಕ್ಷ್ಮಣ, ಪ್ರಭು ಕೆಳಗಿನಮನೆ, ಜಿ.ಮಂಜುನಾಥ್ ಪಟೇಲ್, ಬೆಣ್ಣೆಹಳ್ಳಿ ಹಾಲೇಶಪ್ಪ, ಜಿಗಳಿ ಆನಂದಪ್ಪ, ಭಾನುವಳ್ಳಿ ಸುರೇಶ್, ಜಿಗಳಿ ಪ್ರಕಾಶ್, ಮಡಿವಾಳರ ಬಸವರಾಜ್, ಡಿ.ಡಿ.ಚಿಕ್ಕಣ್ಣ, ಹುಗ್ಗೇರ ರಂಗನಾಥ್, ಬೆಣ್ಣೆಹಳ್ಳಿ ಬಸವರಾಜ್, ಕೊಕ್ಕನೂರು ಹನುಮಂತರಾಯ, ಜಿಗಳಿ ಎನ್.ಬಸವಂತಪ್ಪ.

## ಇಂದು ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ

ಬೆವಿಕಂ ನ್ಯಾಮತಿ ವಾಣಿಜ್ಯ, ಕಾರ್ಯ ಮತ್ತು ಪಾಲನೆ ಉಪವಿಭಾಗದ ಕಛೇರಿಯಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5.30ರ ವರೆಗೆ ಗ್ರಾಹಕರ ಕುಂದು ಕೊರತೆ ಸಭೆ ನಡೆಯಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.


॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಜನನ : 13-05-1961 ಮರಣ : 17.01.2024

ದಾವಣಗೆರೆ ಸಿಟಿ ವಿದ್ಯಾನಗರ ವಾಸಿ
ದಿ. ಶ್ರೀ ಬೂಸ್ನೂರು ರುದ್ರಪ್ಪ ದಿ. ಶ್ರೀ ಶಾರದಮ್ಮ
ಇವರ ಮಗ ಶ್ರೀ ಬಿ.ಆರ್. ಅಶೋಕ್ (ಶಿವಣ್ಣ)
ಮತ್ತು ಸಹೋದರರು ಹಾಗೂ ಮೃತರ ಪತ್ನಿ
ಶ್ರೀಮತಿ ರೂಪಾ ಜಗದೀಶ್ ಬಿ.ಆರ್. ಮೆಡಿಕಲ್ಸ್
ಮತ್ತು ಜನರಲ್ಸ್, ವಿದ್ಯಾನಗರ, ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 17.01.2024ನೇ ಬುಧವಾರ ಬೆಳಗಿನ ಜಾವ
2.00 ಗಂಟೆಗೆ ನನ್ನ ಪೂಜ್ಯ ಪತಿಯವರಾದ

**ನೇತ್ರದಾನಿ**
**ಶ್ರೀ ಬೂಸ್ನೂರು ಜಗದೀಶ್**

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ : 21.01.2024ನೇ ಭಾನುವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ವಿದ್ಯಾನಗರದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಶ್ರೀಮತಿ ರೂಪಾ ಜಗದೀಶ್, ಶ್ರೀಮತಿ ಪೂಜಾ ಶ್ರೀ ದರ್ಶನ್, ಕು. ಹರ್ಷಿತ ಶ್ರೀಮತಿ ಮತ್ತು ಶ್ರೀ ಬಿ.ಆರ್. ಅಶೋಕ್ (ಶಿವಣ್ಣ), ಮತ್ತು ಸಹೋದರರು, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಬೂಸ್ನೂರು ವಂಶಸ್ಥರು ಹಾಗೂ ಬಂಧು-ಮಿತ್ರರು.**

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ


# ಕನ್ನಡ ಸಂರಕ್ಷಣೆಗೆ ಶ್ರಮಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು

## ಹರಪನಹಳ್ಳಿಯ ಎಡಿಬಿ ಪ್ರಥಮ ದರ್ಜೆ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಕೋರಿ ವಿರುಪಾಕ್ಷಪ್ಪ ಶ್ಲಾಘನೆ



ಹರಪನಹಳ್ಳಿ, ಜ.19- ಕನ್ನಡ ನಾಡು, ನುಡಿಯ ಸಂರಕ್ಷಣೆ ಮತ್ತು ಕನ್ನಡ ಭಾಷೆಗಾಗಿ ಶ್ರಮಿಸಲು ಕಟ್ಟಲಾಗಿರುವ ಸಂಸ್ಥೆಯೇ ಕನ್ನಡ ಸಾಹಿತ್ಯ ಪರಿಷತ್ತು ಎಂದು ಎಡಿಬಿ ಪ್ರಥಮ ದರ್ಜೆ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಕೋರಿ ವಿರುಪಾಕ್ಷಪ್ಪ ಹೇಳಿದರು.

ತಾಲ್ಲೂಕಿನ ಚಿರಸ್ತಹಳ್ಳಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಇಂದು ಹಮ್ಮಿಕೊಂಡಿದ್ದ ಯರಬಾಸಿ ಗಂಗಮ್ಮ ಸ್ಮರಣಾರ್ಥ, ಮೈದೂರು ಸಾವಿತ್ರಮ್ಮ ದತ್ತಿ. ಕಂಚಿಕೇರಿ ಬಿದರಿ ಸಿದ್ದಮ್ಮ ವೀರಮ್ಮ ಸ್ಮಾರಕ, ದಿ. ಮುದೇನೂರು ವಿರೂಪಾಕ್ಷಪ್ಪ ಎನ್. ಸುಮಂಗಲಮ್ಮ ಶಿವರುದ್ರಪ್ಪ ದತ್ತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯವನ್ನು ನಾಡಿನ ಮೂಲೆ ಮೂಲೆಗಳಲ್ಲಿ ಹಬ್ಬಿಸಲು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗು ತ್ತಿದ್ದು, ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಹಾಗೂ ಕನ್ನಡ ಪರ ಸಂಸ್ಥೆಗಳಿಗೆ ಮಾತೃಸಂಸ್ಥೆಯಾಗಿ ಪ್ರಾರಂಭದಿಂದಲೂ ಕನ್ನಡ-ಕನ್ನಡಿಗ-ಕರ್ನಾಟಕದ ಸೇವೆಗೆ ಕಂಕಣ ಬದ್ಧವಾಗಿದೆ ಎಂದರು.

ಡಾ. ತಿಪ್ಪೇಸ್ವಾಮಿ ಜನಪದ ಸಾಹಿತ್ಯ ಮತ್ತು ಕಲೆ ಹಾಗೂ ಸಾವಯವ ಕೃಷಿ ಅಧುನಿಕ ಬೀಜೋತ್ಪಾದನೆ ಕುರಿತು ಉಪನ್ಯಾಸ ನೀಡಿ ಜನಪದ ಸಾಹಿತ್ಯ ಆಕಾಶದಷ್ಟು ವಿಶಾಲ, ಸಾಗರದಷ್ಟು ಆಳ. ಅದರಲ್ಲಿ ಹಲವು ಪ್ರಕಾರಗಳಿವೆ-ಗಾದೆ, ಒಗಟು, ಕಥೆ, ಗೀತೆ, ಪ್ರಮುಖವಾಗಿವೆ. ಇಡೀ ಜಗತ್ತಿನ ಸಾಹಿತ್ಯದ ಮೂಲವನ್ನೆಲ್ಲ ಜನಪದ ಸಾಹಿತ್ಯದಲ್ಲಿ ಕಾಣಬಹುದು ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ಏಕೀಕರಣದ ಹೋರಾಟಗಾರರೂ ಸಾಹಿತಿಗಳೂ ವಿದ್ವಾಂಸರೂ ಮೈಸೂರಿನ ಆಡಳಿತಗಾರರೂ, ಅಧ್ಯಾಪಕರೂ, ಸಾರ್ವಜನಿಕ ಗಣ್ಯರು ಹೀಗೆ ಹಲವಾರು ಗಣ್ಯ ವ್ಯಕ್ತಿಗಳ ನಾಡು, ನುಡಿ ಸೇವಕರ ಒಂದು ಗುಂಪಿನ ಜನರ ಸಂಯುಕ್ತ ಶ್ರಮ, ತ್ಯಾಗಗಳ ಫಲವಾಗಿ ರೂಪುಗೊಂಡಿತು ಎಂದರು.

ಈ ಸಂಧರ್ಭದಲ್ಲಿ ಎಡಿಬಿ ಕಾಲೇಜು ಪ್ರಾಚಾರ್ಯ ಡಾ. ಸಿದ್ದಲಿಂಗಮೂರ್ತಿ. ಟಿಎಪಿಸಿ ಎಂ.ಎಸ್ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಕಲ್ಮಠ. ಆರುಂಡಿ ನಾಗರಾಜ, ಜಿ. ಮಹಾದೇವಪ್ಪ, ಕಾಲೇಜು ಆಡಳಿತ ಮಂಡಳಿ ಸದಸ್ಯ ಬಿ. ಮಂಜುನಾಥ, ಪಿ. ಜಿ. ದೊಡ್ಡಬಸಪ್ಪ, ಡಾ. ಕುಮಾರ, ಎಸ್. ಆನಂದ, ನವಾಜ್ ಬಾಷಾ ಸಿ. ಡಾ. ಗೋವರ್ಧನ, ಕೆ. ಆನಂದ, ವೀರೇಶ ಗಡ್ಡಿ, ಲತಾ ಬಣಕಾರ ಚಂದ್ರಪ್ಪ, ಕೆ. ಎಂ. ಚನ್ನಮಲ್ಲಿಕಾರ್ಜುನಯ್ಯ, ಡಾ. ಎ. ಎಂ. ರಾಜಶೇಖರಯ್ಯ ಇದ್ದರು.

## ಬಹುತೇಕ ಎಲ್ಲ ರಾಜ್ಯಗಳಲ್ಲಿ ಎನ್.ಇ.ಪಿ. ಜಾರಿ : ಪ್ರಧಾನ್

ಹೈದರಾಬಾದ್, ಜ. 19 – ಬಹುತೇಕ ಎಲ್ಲ ರಾಜ್ಯಗಳು 2020ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರುತ್ತಿವೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

ಈ ನೀತಿಯನ್ನು ಜಾರಿಗೆ ತರುವಲ್ಲಿ ಹಿಂಜರಿಕೆ ತೋರುತ್ತಿದ್ದ ರಾಜ್ಯಗಳೂ ಸಹ, ಇದೇ ನೀತಿಯನ್ನು ಬೇರೆ ಹೆಸರುಗಳಲ್ಲಿ ಜಾರಿಗೆ ತರುತ್ತಿವೆ ಎಂದವರು ಹೇಳಿದ್ದಾರೆ.

ಅವರು ಬೇರೆ ಹೆಸರುಗಳಿಂದ ತೃಪ್ತಿಪಟ್ಟುಕೊಳ್ಳಲಿ. ಆದರೆ, ನೀತಿ ಜಾರಿಯಾಗುತ್ತಿರುವ ಬಗ್ಗೆ ನನಗೆ ಸಂತೋಷವಿದೆ ಎಂದವರು ಹೇಳಿದ್ದಾರೆ.

ಬಹುತೇಕ ಎಲ್ಲ ರಾಜ್ಯಗಳು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರುತ್ತಿವೆ. ಇದು ಐತಿಹಾಸಿಕ ದಾಖಲೆಯಾಗಿದೆ ಎಂದು ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು ಹೇಳಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ರಾಮ ಜ್ಯೋತಿ ಬೆಳಗಲು ಪ್ರಧಾನಿ ಕರೆ**
ಸೊಲ್ಲಾಪುರ : ರಾಮ ದೇವರ ಆದರ್ಶದಂತೆ ಆಡಳಿತ ನಡೆಸುವ ಅಗತ್ಯವನ್ನು ಒತ್ತಿ ಹೇಳಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಜನವರಿ 22ರಂದು ನಾಗರಿಕರು ರಾಮ ಜ್ಯೋತಿ ಬೆಳಗಬೇಕು ಎಂದು ಕರೆ ನೀಡಿದ್ದಾರೆ. ಇದು ಭಾರತದಲ್ಲಿ ಬಡತನ ನಿವಾರಣೆಗೆ ಸ್ಫೂರ್ತಿಯಾಗಲಿದೆ ಎಂದೂ ಅವರು ತಿಳಿಸಿದ್ದಾರೆ.

**ಖೇಲೋ ಇಂಡಿಯಾ ಯೂತ್ ಗೇಮ್ಸ್‌ಗೆ ಚಾಲನೆ**
ಚೆನ್ನೈ : ಖೇಲೋ ಇಂಡಿಯಾ ಯೂತ್ ಗೇಮ್ಸ್‌ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಚಾಲನೆ ನೀಡಿದ್ದಾರೆ. ಸ್ರಕಾರ 2029ರಲ್ಲಿ ಯುವ ಒಲಂಪಿಕ್ಸ್ ಹಾಗೂ 2036ರಲ್ಲಿ ಒಲಂಪಿಕ್ ಪಂದ್ಯಾವಳಿಯನ್ನು ದೇಶದಲ್ಲಿ ಆಯೋಜಿಸಲು ಪ್ರಯತ್ನ ನಡೆಸುತ್ತಿದೆ ಎಂದೂ ಮೋದಿ ಹೇಳಿದ್ದಾರೆ.

**ಚುನಾವಣೆಗಾಗಿ ಸಮಾಜವಾದಿ ಪಕ್ಷ, ಲೋಕ ದಳಗಳ ಮೈತ್ರಿ**
ಲಖ್ನೌ : ಸಮಾಜವಾದಿ ಪಕ್ಷ ಹಾಗೂ ರಾಷ್ಟ್ರೀಯ ಲೋಕ ದಳ ಪಕ್ಷಗಳು ಲೋಕಸಭಾ ಚುನಾವಣೆಗಾಗಿ ಮೈತ್ರಿ ಮಾಡಿಕೊಳ್ಳುವುದಾಗಿ ಘೋಷಿಸಿವೆ. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಏಳು ಸೀಟುಗಳಲ್ಲಿ ಲೋಕ ದಳ ಸ್ಪರ್ಧಿಸಲಿದೆ.

**ಏಕಕಾಲಕ್ಕೆ ಚುನಾವಣೆಗೆ ಕಾಂಗ್ರೆಸ್ ವಿರೋಧ**
ನವದೆಹಲಿ : ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವುದನ್ನು ಕಾಂಗ್ರೆಸ್ ಪಕ್ಷ ತೀವ್ರವಾಗಿ ವಿರೋಧಿಸಿದೆ. ದೇಶಾದ್ಯಂತ ಏಕಕಾಲಕ್ಕೆ ಚುನಾವಣೆ ನಡೆಸುವುದು ಒಕ್ಕೂಟ ವ್ಯವಸ್ಥೆ ಹಾಗೂ ಸಂವಿಧಾನದ ಮೂಲ ತಳಹದಿಗೆ ವಿರುದ್ಧವಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಅಲ್ಲದೇ, ಏಕಕಾಲಕ್ಕೆ ಚುನಾವಣೆ ನಡೆಸುವ ಕುರಿತು ರೂಪಿಸಲಾಗಿರುವ ಸಮಿತಿಯನ್ನು ವಿಸರ್ಜಿಸಬೇಕು ಎಂದೂ ಒತ್ತಾಯಿಸಿದ್ದಾರೆ.

**ಸರ್ಕಾರಿ ಮನೆ ಖಾಲಿ ಮಾಡಿದ ಮೊಯಿತ್ರ**
ನವದೆಹಲಿ : ಲೋಕಸಭಾ ಸ್ಥಾನದಿಂದ ಉಚ್ಚಾಟಿತರಾಗಿದ್ದ ತೃಣಮೂಲ ಕಾಂಗ್ರೆಸ್‌ನ ಮೊಹುವಾ ಮೊಯಿತ್ರ ಅವರು, ಶುಕ್ರವಾರ ತಮಗೆ ನೀಡಲಾಗಿದ್ದ ಸರ್ಕಾರಿ ಬಂಗಲೆಯನ್ನು ತೆರವುಗೊಳಿಸಿದ್ದಾರೆ. ಬಂಗಲೆ ತೆರವು ತಡೆಯುವಂತೆ ಮೊಯಿತ್ರ ಮಾಡಿಕೊಂಡ ಮನವಿಯನ್ನು ದೆಹಲಿ ಹೈಕೋರ್ಟ್ ತಳ್ಳಿ ಹಾಕಿತ್ತು.

**ದೆಹಲಿಯಿಂದ ಆಡಳಿತ ನಡೆಸಲು ಬಿಜೆಪಿ ಒಲವು : ರಾಹುಲ್ ಗಾಂಧಿ**
ಉತ್ತರ ಲಖೀಂಪುರ (ಅಸ್ಸಾಂ) : ಬಿಜೆಪಿ ಹಾಗೂ ಆರ್.ಎಸ್.ಎಸ್.ಗಳು ದೆಹಲಿಯಿಂದ ದೇಶದ ಆಡಳಿತ ನಡೆಸುವುದರಲ್ಲಿ ಒಲವು ಹೊಂದಿವೆ. ಆದರೆ, ಕಾಂಗ್ರೆಸ್ ಪಕ್ಷ ಸ್ಥಳೀಯ ಆಡಳಿತವನ್ನು ಬೆಂಬಲಿಸುತ್ತದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಎಲ್ಲಾ ರಾಜ್ಯಗಳು ಹಾಗೂ ಪ್ರಾಂತ್ಯಗಳಿಗೆ ಕಾಂಗ್ರೆಸ್ ಸಮಾನ ಪ್ರಾಮುಖ್ಯತೆ ನೀಡುತ್ತದೆ ಎಂದೂ ಅವರು ಹೇಳಿದ್ದಾರೆ.

**ಸೂಕ್ತ ಪ್ರಾತಿನಿಧ್ಯ ಕೊಡದಿದ್ದರೆ ಪ್ರತ್ಯೇಕ ಸ್ಪರ್ಧೆ : ಮಮತಾ**
ಕೊಲ್ಕೊತಾ : ತೃಣಮೂಲ ಕಾಂಗ್ರೆಸ್‌ಗೆ ಸೂಕ್ತ ಪ್ರಾಮುಖ್ಯತೆ ನೀಡದೇ ಇದ್ದರೆ ಪಶ್ಚಿಮ ಬಂಗಾಳದ ಎಲ್ಲಾ 42 ಕ್ಷೇತ್ರಗಳಲ್ಲಿ ತಮ್ಮ ಪಕ್ಷ ಸ್ಪರ್ಧಿಸಲಿದೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಐ.ಎನ್.ಡಿ.ಐ.ಎ. ಮೈತ್ರಿಕೂಟದಲ್ಲಿ ಸೀಟು ಹಂಚಿಕೆ ಕುರಿತು ಅಪಸ್ವರ ಕೇಳಿ ಬರುತ್ತಿರುವ ಮಧ್ಯೆ ಅವರು ಈ ಹೇಳಿಕೆ ನೀಡಿದ್ದಾರೆ.

# ಉತ್ತರ ಪ್ರದೇಶದ ಜೈಲುಗಳಲ್ಲೂ ರಾಮನಾಮ

### ಪ್ರಾಣ ಪ್ರತಿಷ್ಠಾಪನಾ ಸಮಾರಂಭ ಪ್ರಸಾರ, ರಾಮ ದೇವರಿಗೆ ಕರಕುಶಲ ವಸ್ತುಗಳಿಂದ ಭಕ್ತಿ ಸಮರ್ಪಣೆ

ಲಖ್ನೌ, ಜ. 19 – ರಾಮ ದೇವಾಲಯದ ಪ್ರಾಣ ಪ್ರತಿಷ್ಠಾಪನಾ ಸಂಭ್ರಮ ಹೊರ ಜಗತ್ತು ಅಷ್ಟೇ ಅಲ್ಲದೇ, ಉತ್ತರ ಪ್ರದೇಶದ ಜೈಲುಗಳಿಗೂ ತಲುಪಿದೆ. ಜೈಲಿನಲ್ಲಿರುವ ಬಂಧಿತರು ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕಾಗಿ ತವಕದಿಂದ ಕಾಯುತ್ತಿದ್ದು, ಈ ಸಮಾರಂಭವನ್ನು ಜೈಲುಗಳಲ್ಲಿ ನೇರ ಪ್ರಸಾರ ಮಾಡಲಾಗುವುದು.

ಅಲ್ಲದೇ, ಸಮಾರಂಭಕ್ಕೆ ಕಳಿಸಲು ಹಲವಾರು ವಸ್ತುಗಳನ್ನು ಖೈದಿಗಳು ಸಿದ್ಧಪಡಿಸುತ್ತಿದ್ದಾರೆ. ಜೈಲಿನಲ್ಲಿ ಈ ಸಮಾರಂಭದ ಹಿನ್ನೆಲೆಯಲ್ಲಿ ರಾಮಕಥೆ ಹಾಗೂ ಭಜನೆಗಳನ್ನೂ ಆಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜೈಲುಗಳಲ್ಲಿ ಪ್ರಾಣ ಪ್ರತಿಷ್ಠಾಪನಾ ಸಮಾರಂಭದ ಪ್ರಸಾರಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಉತ್ತರ ಪ್ರದೇಶದ ಬಂಧೀಖಾನೆ ಸಚಿವ ಧರ್ಮವೀರ್ ಪ್ರಜಾಪತಿ ಹೇಳಿದ್ದಾರೆ.

ಜೈಲಿನಲ್ಲಿರುವ ಎಲ್ಲರೂ ತೀವ್ರ ಸ್ವರೂಪದ ಅಪರಾಧಿಗಳಲ್ಲ. ಬಂಧಿತರು ಸಮಾರಂಭ ವೀಕ್ಷಿಸಲು ಉತ್ಸುಕರಾಗಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಜೈಲುಗಳಲ್ಲಿ ಎಲ್.ಇ.ಡಿ. ಟಿವಿಗಳ ವ್ಯವಸ್ಥೆ ಮಾಡಲಾಗುತ್ತಿದೆ. ಇದು ಅಧ್ಯಾತ್ಮಿಕ ಅನುಭವವಾಗಲಿದ್ದು, ಇದರಿಂದ ಅವರು ಜೈಲಿನಿಂದ ಹೊರ ಬಂದ ನಂತರ ಅಪರಾಧ ಕೈ ಬಿಡಲು ಸಹಾಯವಾಗಬಹುದು ಎಂದು ಬಂಧೀಖಾನೆಯ ಹೆಚ್ಚುವರಿ ಪ್ರಧಾನ ನಿರ್ದೇಶಕ ಎಸ್.ಎನ್. ಸಬತ್ ಹೇಳಿದ್ದಾರೆ.

ಭದೋಹಿ ಜೈಲಿನಿಂದ ರಾಮ ದೇವಾಲಯದ ಚಿತ್ರ ಇರುವ ತೂಗು ಚಾಪೆಗಳನ್ನು ಅಯೋಧ್ಯೆಗೆ ರವಾನಿಸಲಾಗಿದೆ. ಇದಕ್ಕೆ ಅಗತ್ಯವಿರುವ ಎಲ್ಲಾ ವಸ್ತುಗಳನ್ನು ಜಿಲ್ಲಾಡಳಿತ ಒದಗಿಸಿತ್ತು ಎಂದು ಸಬತ್ ಹೇಳಿದ್ದಾರೆ.

ರಾಯ್‌ಬರೇಲಿಯಲ್ಲಿ ಖೈದಿಗಳು 11 ಸಾವಿರ ದೀಪಗಳನ್ನು ಉತ್ಪಾದಿಸಿದ್ದಾರೆ. ಇವುಗಳನ್ನು ಜೈಲಿನಲ್ಲಿ ಹಾಗೂ ಸರ್ಕಾರಿ ಕಚೇರಿಗಳಲ್ಲಿ ಸಮಾರಂಭದ ದಿನ ಬಳಸಲಾಗುವುದು.

ನೋಯ್ಡಾ ಜೈಲಿನಲ್ಲಿ 1,000 ಎಲ್.ಇ.ಡಿ. ಬಲ್ಬ್‌ಗಳನ್ನು ಉತ್ಪಾದಿಲಾಗಿದೆ. ಮೈನಪುರಿ ಜಿಲ್ಲಾ ಬಂಧೀಖಾನೆಯ ಖೈದಿಗಳು ತರ್ಕಶಿ ಕಲೆಯಲ್ಲಿ ರಾಮ ಮಂದಿರ ಹಾಗೂ ರಾಮ ದರ್ಬಾರ್ ರೂಪಿಸಿದ್ದಾರೆ.

ಸಹರಾನ್‌ಪುರ ಜೈಲಿನ ಖೈದಿಗಳು ರಾಮ ದೇವಾಲಯದ ಮರದ ಮಾದರಿ ರೂಪಿಸಿದ್ದಾರೆ. ಫತೇಪುರದ ಖೈದಿಗಳು ರಾಮ ದೇವರ ಹೆಸರು ಹಾಗೂ ದೇವಾಲಯದ ಚಿತ್ರಣ ಇರುವ ಚೀಲಗಳನ್ನು ರೂಪಿಸಿದ್ದಾರೆ. ಫಿಲಿಬಿಟ್ ಹಾಗೂ ಅಜಮ್‌ಘರ್ ಖೈದಿಗಳು ದೀಪಗಳನ್ನು ಉತ್ಪಾದಿಸಿದ್ದಾರೆ. ಚಿತ್ರಕೂಟ ಜೈಲಿನಲ್ಲಿ ಮೂರು ದಿನಗಳ ಶ್ರೀರಾಮ ಕಥೆ ಆಯೋಜಿಸಲಾಗಿದೆ. ಅಯೋಧ್ಯೆ ಜೈಲಿನಲ್ಲೂ ರಾಮ ಕಥೆ ಆಯೋಜಿಸಲಾಗಿದೆ. ರಾಮಕಥೆ ಹೇಳುವವರೂ ಖೈದಿಗಳೇ ಆಗಿದ್ದಾರೆ. ಅವರಿಗೆ ಹಾರ್ಮೋನಿಯಂ ಹಾಗೂ ಇತರೆ ಸಂಗೀತ ಉಪಕರಣಗಳನ್ನು ಒದಗಿಸಲಾಗಿದೆ.



## ಭಾನುವಳ್ಳಿ : ಹೋರಾಟ ತೀವ್ರಗೊಳಿಸಲು ತೀರ್ಮಾನ

ಮಲೇಬೆನ್ನೂರು, ಜ.19- ಭಾನುವಳ್ಳಿ ಗ್ರಾಮದ ರಾಜವೀರ ಮದಕರಿ ನಾಯಕ ಮಹಾದ್ವಾರದ ಪಕ್ಕದಲ್ಲಿ ಅನಧಿಕೃತವಾಗಿ ಪ್ರತಿಷ್ಠಾಪಿಸಿರುವ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ತೆರವುಗೊಳಿಸುವಂತೆ ಒತ್ತಾಯಿಸಿ ವಾಲ್ಮೀಕಿ ಸಮಾಜದವರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಶುಕ್ರವಾರ 11ನೇ ದಿನಕ್ಕೆ ಕಾಲಿಟ್ಟಿದೆ.

ಜಿಲ್ಲಾಧಿಕಾರಿಗಳು ಶೀಘ್ರ ಪ್ರತಿಮೆ ತೆರವುಗೊಳಿಸುವುದಾಗಿ ಹೇಳಿದ್ದರು. ಆದರೆ, ಇದುವರೆಗೂ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗಾಗಿ ನಮ್ಮ ಮುಂದಿನ ಹೋರಾಟವನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ತೀವ್ರಗೊಳಿಸುವುದಾಗಿ ಮುಖಂಡರು ತಿಳಿಸಿದರು.

ಗ್ರಾ.ಪಂ ಸದಸ್ಯೆ ಶ್ರೀಮತಿ ಗಿರಿಜಮ್ಮ, ರತ್ನಮ್ಮ, ಮಲ್ಲಿಗಮ್ಮ, ಗಂಗಮ್ಮ, ಹೇಮಾಶ್ರೀ, ಶಾಂತಮ್ಮ, ಕಲಾವತಿ, ಶಿವಕ್ಕ, ಸರೋಜಮ್ಮ, ವಾಣಿ, ಶೀಲಾ, ಜಯಮ್ಮ, ಬಾತಿ ಜಯಮ್ಮ, ದೊಡ್ಡಮನಿ ಪಾರ್ವತಿ, ನಾಗಮ್ಮ, ಮುಖಂಡರಾದ ಟಿ.ಪುಟ್ಟಪ್ಪ. ಕಾಮ್ಲಾಪುರ ಶಿವಪ್ಪ, ನಾರಾಯಣಪ್ಪ, ಮಾಂತೇಶ್ ಸೇರಿದಂತೆ ಇನ್ನು ಅನೇಕರು ಭಾಗವಹಿಸಿದ್ದರು.

## ಹಾಲಿವಾಣದಲ್ಲಿ ಇಂದು ಉಚಿತ ಆರೋಗ್ಯ ತಪಾಸಣೆ ಶಿಬಿರ

ಮಲೇಬೆನ್ನೂರು ಸಮೀಪದ ಹಾಲಿವಾಣ ಗ್ರಾಮದಲ್ಲಿ ಇಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ ಮಂಗಳೂರಿನ ಕೆ.ಎಸ್.ಹೆಗಡೆ ಆಸ್ಪತ್ರೆಯ ನುರಿತ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಶ್ರೀ ಕರಿಯಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಗ್ರಾಮದ ಶಿವಕ್ಕಳ ಆಂಜನೇಯ ತಿಳಿಸಿದ್ದಾರೆ.

## ಎಐಎಸ್‌ಎಫ್ ತಾ.ಸಂಚಾಲಕರ ಆಯ್ಕೆ







ದಾವಣಗೆರೆ, ಜ. 19- ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ (ಎಐಎಸ್‌ಎಫ್) ದ ದಾವಣಗೆರೆ ತಾಲ್ಲೂಕು ಸಂಚಾಲಕರುಗಳಾಗಿ ಹರ್ಷ, ಅಜಿತ್ ಮತ್ತು ವಿನಾಯಕ ಅವರುಗಳು ಆಯ್ಕೆಯಾಗಿದ್ದಾರೆ ಎಂದು ಎಐಎಸ್‌ಎಫ್‌ನ ದಾವಣಗೆರೆ ಜಿಲ್ಲಾ ಉಸ್ತುವಾರಿ ಆವರಗೆರೆ ಚಂದ್ರು ತಿಳಿಸಿದ್ದಾರೆ.



## ಜಿ.ಬೇವಿನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಆಯ್ಕೆ

ಮಲೇಬೆನ್ನೂರು, ಜ.19- ಜಿ.ಬೇವಿನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಕೆ.ರುದ್ರಗೌಡ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ಕಮಲಮ್ಮ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ನೂತನ ನಿರ್ದೇಶಕರಾದ ಬಿ.ರವಿಕುಮಾರ್, ಬಿ.ಕೆ.ಬಸವರಾಜ್, ಪಿ.ಸಿ.ಮಂಜುನಾಥ್, ಪಿ.ವಿಜಯಕುಮಾರ್, ಪಿ. ಮಲ್ಲನಗೌಡ, ಬಿ.ಕೆ.ಪ್ರಕಾಶ್, ಶ್ರೀಮತಿ ಗಂಗಮ್ಮ, ಎಂ. ಸುರೇಶ್, ಹೆಚ್.ಟಿ.ವೆಂಕಟೇಶ್, ಶ್ರೀಮತಿ ಸವಿತಾ ಮತ್ತು ಕಾರ್ಯದರ್ಶಿ ಬಿ.ಕೆ.ಮಂಜುನಾಥ್, ಹಾಲು ಪರೀಕ್ಷಕ ಬಿ.ಜಿ.ಲಿಂಗರಾಜ್, ಸಹಾಯಕ ಪಿ.ಜಿ.ಸಿದ್ದನಗೌಡ ಮತ್ತು ಗ್ರಾಮದ ಮುಖಂಡರು ಈ ವೇಳೆ ಹಾಜರಿದ್ದರು.

# ಪ್ರಕೃತಿಯಲ್ಲಿ ನಡೆಯುವ ಉತ್ತಮ ಬದಲಾವಣೆಯೇ 'ಸಂಕ್ರಾಂತಿ'



ದಾವಣಗೆರೆ, ಜ.19- ಬದಲಾವಣೆ ಪ್ರಕೃತಿಯ ನಿಯಮ, ಪ್ರಕೃತಿಯಲ್ಲಿ ನಡೆಯುವ ಉತ್ತಮ ಬದಲಾವಣೆಯೇ ಸಂಕ್ರಾಂತಿ ಎಂದು ಆದರ್ಶ ಯೋಗ ಪ್ರತಿಷ್ಠಾನದ ಯೋಗಾಚಾರ್ಯ ರಾಘವೇಂದ್ರ ಗುರೂಜಿ ಅಭಿಪ್ರಾಯ ಪಟ್ಟರು.

ನಗರದ ಆದರ್ಶ ಯೋಗ ಪ್ರತಿಷ್ಠಾನ, ಮಹಾಮ್ಮಾಯಿ ವಿಶ್ವಯೋಗ ಮಂದಿರ ಹಾಗೂ ಯೋಗ ಚಿಕಿತ್ಸಾ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂಕ್ರಾಂತಿ ಹಬ್ಬದ ಪ್ರಯುಕ್ತ ಸಂಕ್ರಾಂತಿ ಸುಗ್ಗಿ ಹಾಡುಗಳು-ಸುಗಮ ಸಂಗೀತ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಗುರೂಜಿ ಮಾತನಾಡಿದರು.

ಸಂಕ್ರಾಂತಿ ಎಂದರೆ ಸಮ್ಯಕ್ ಎಂದರ್ಥ, ಸಮ್ಯಕ್ ಎಂದರೆ ಉತ್ತಮ ರೀತಿ, ಕ್ರಾಂತಿ ಎಂದರೆ ಬದಲಾವಣೆ ಎಂದರ್ಥ. ಸಂಕ್ರಾಂತಿ ಒಂದು ಚಲನಶೀಲತೆಯ ಹಬ್ಬ. ಪ್ರತಿಬಾರಿಯೂ ರಾಶಿ ಚಕ್ರದ ಚಿಹ್ನೆ ಬದಲಾದಾಗ ಗ್ರಹದ ಚಲನೆಯನ್ನು ಸೂಚಿಸಲು ಈ ಚಲನೆಯಿಂದ ನಮ್ಮ ಜೀವನವು ಪೋಷಿಸಲ್ಪಟ್ಟಿದೆ ಎಂದು ಅರ್ಥ ಮಾಡಿಕೊಳ್ಳಲು ಸಂಕ್ರಾಂತಿ ಎಂದು ಕರೆಯುವರು. ಈ ದಿನ ಸೂರ್ಯನು ಮಕರ ರಾಶಿಯಲ್ಲಿ ಸಂಕ್ರಮಣಗೊಳ್ಳುತ್ತಾನೆ. ಸೂರ್ಯನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ ದಿಕ್ಕು ಬದಲಿಸುತ್ತಾನೆ. ಮಕರ ಸಂಕ್ರಾಂತಿಯಿಂದ ರಥಸಪ್ತಮಿಯವರೆಗಿನ ಕಾಲವು ಪರ್ವಕಾಲವಾಗಿರುತ್ತದೆ. ಈ ದಿನಗಳಲ್ಲಿ ಮಾಡಿದ ದಾನ ಮತ್ತು ಪುಣ್ಯ ಕರ್ಮ ವಿಶೇಷ ಫಲವನ್ನು ಕೊಡುತ್ತವೆ. ಈ ದಿನಗಳಲ್ಲಿ ವಾತಾವರಣವು ತಂಪಾಗಿದ್ದು ಚಳಿಗೆ ಮೈ ಕೈ ಚರ್ಮ ಸುಕ್ಕುಗಟ್ಟಿ ಚರ್ಮವ್ಯಾಧಿ ತೊಂದರೆಗಳು ಕಂಡುಬರುತ್ತವೆ.

ಎಳ್ಳಿನ ಜೊತೆಗೆ ಬೆಲ್ಲ ಬೆರೆಸಿ ತಿನ್ನುವುದರಿಂದ ಶರೀರದಲ್ಲಿ ಕ್ಯಾಲ್ಷಿಯಂ, ಮೆಗ್ನೀಷಿಯಂ, ಪೊಟ್ಯಾಶಿಯಂ ಮುಂತಾದ ರಾಸಾಯನಿಕ ವಸ್ತುಗಳು ಶರೀರಕ್ಕೆ ಲಭಿಸುತ್ತವೆ. ಹಾಗಾಗಿ ಈ ಸಂಕ್ರಮಣ ಕಾಲದಲ್ಲಿ ಎಳ್ಳು ಬೆಲ್ಲದ ಸೇವನೆ ಮಾಡುವುದು ಸೂಕ್ತ. ಪ್ರಕೃತಿಗೂ ನಮ್ಮ ಜೀವನ ಶೈಲಿಗೂ ಅವಿನಾಭಾವ ಸಂಬಂಧವಿದೆ. ಇದನ್ನು ಅರಿತು ನಾವು ಬಾಳಿದರೆ ಸ್ವರ್ಗ ಸುಖವನ್ನು ಪಡೆಯಬಹುದು ಎಂದು ಹೇಳಿದರು.

ಸಂಗೀತ ಗಾಯಕಿ ರುದ್ರಾಕ್ಷಿಬಾಯಿ ಮತ್ತು ಅವರ ಶಿಷ್ಯ ವೃಂದದ ಗಾಯಕ ನಿರಂಜನ್‌ಪ್ರಸಾದ್ ಅವರು ಸಂಕ್ರಾಂತಿಯ ಸುಗ್ಗಿಯ ಹಾಡುಗಳು ಎಂಬ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಯೋಗ ಶಿಕ್ಷಕ ವಿ. ಲಲಿತ್‌ಕುಮಾರ್ ಜೈನ್, ಪ್ರಭುಸ್ವಾಮಿ ಹಿರೇಮಠ್, ಡಾ. ಎಂ. ಯು. ಎಂ. ಸಿದ್ದಯ್ಯ, ವೃಷಭ್ ಮೆಡಿಕಲ್‌ನ ಸುನೀಲ್‌ಕುಮಾರ್, ಶ್ರೀಮತಿ ವೀಣಾ ಪಾಲನ್‌ಕರ್, ವಿನೀತ ಪಾಲನ್‌ಕರ್ ಇತರರು ಭಾಗವಹಿಸಿದ್ದರು.

# ಆಹಾರ ಕೂಡ ಒಂದು ವಿಜ್ಞಾನ : ಎಂ.ಜಿ.ಈಶ್ವರಪ್ಪ



ದಾವಣಗೆರೆ, ಜ. 19- ಆಹಾರ ಕೂಡ ಒಂದು ವಿಜ್ಞಾನ ವಿದ್ದಂತೆ. ರುಚಿಕರ, ಪುಷ್ಟಿದಾಯಕ ಮತ್ತು ಆರೋಗ್ಯಕರವಾಗಿರಬೇಕು. ಆಹಾರ ತಯಾರಿಕೆ ಕೂಡ ವಿದ್ಯಾರ್ಥಿಗಳಿಗೆ ಜೀವನೋಪಾಯಕ್ಕೆ ಸಹಕಾರಿಯಾಗಬಹುದು ಎಂದು ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಹೇಳಿದರು.

ನಗರದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಕಳೆದ ವಾರ ನಡೆದ ಆಹಾರ ಮೇಳ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಹಾರ ಕೇವಲ ನಾಲಿಗೆ ರುಚಿಗೆ ಸೀಮಿತವಾಗದೇ ಆರೋಗ್ಯಕ್ಕೆ ಪೂರಕವಾಗಿರಬೇಕು. ವಿದ್ಯಾರ್ಥಿಗಳು ಸಹ ಖುಷಿಯಿಂದ ಆಹಾರ ಮೇಳದಲ್ಲಿ ಪಾಲ್ಗೊಂಡು ಹೊಸ ಬಗೆಯ ಆಹಾರ ಪದಾರ್ಥಗಳನ್ನು ತಯಾರಿಸುವ ಪ್ರಯತ್ನದಲ್ಲಿ ಆಸಕ್ತಿ ತೋರಿರುವುದು ಸಂತಸದ ವಿಚಾರ ಎಂದರು.

ಗೃಹ ವಿಜ್ಞಾನ ವಿಷಯ ಆಯ್ಕೆ ಮಾಡಿಕೊಂಡು, ತರಗತಿಯಲ್ಲಿ ಕಲಿಯುವ ವಿದ್ಯಾರ್ಥಿಗಳು ಹೊರ ಬಂದು ಶ್ರಮವಹಿಸಿ ಬಗೆ ಬಗೆಯ ಆಹಾರ ಪದಾರ್ಥಗಳನ್ನು ತಯಾರಿಸಿದ್ದಾರೆ. ತನ್ಮೂಲಕ ಮಾರುಕಟ್ಟೆ ವ್ಯವಸ್ಥೆ ಮತ್ತು ವ್ಯವಹಾರ ಜ್ಞಾನ ವೃದ್ಧಿಯಾಗಲು ಈ ಮೇಳ ಹೆಚ್ಚು ಉಪಯುಕ್ತವಾಗಲಿದೆ ಎಂದು ಹೇಳಿದರು.

ಬಾಪೂಜಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷೆ ಕಿರುವಾಡಿ ಗಿರಿಜಮ್ಮ, ಕಾಲೇಜಿನ ಪ್ರಾಚಾರ್ಯರಾದ ಕಮಲಾ ಸೊಪ್ಪಿನ ಮಾತನಾಡಿದರು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ರಮೇಶ್ ದೂಪದಹಳ್ಳಿ, ತೀರ್ಪುಗಾರರಾದ ಕನ್ನಿಕಾ ಸಾನ್ವಿ, ಸುಮ ನಂಜುಂಡಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

# ಹರಿಪ್ರಸಾದ್ ಹೇಳಿಕೆಯ ಸಿ.ಸಿ.ಬಿ. ವಿಚಾರಣೆ; ರಾಜ್ಯದಲ್ಲಿ ಆರೆಸ್ಸೆಸ್ ಸರ್ಕಾರ ಎಂದು ತರಾಟೆ

ಬೆಂಗಳೂರು, ಜ. 19 - ರಾಜ್ಯದಲ್ಲಿರುವುದು ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವೇ ಅಥವಾ ಆರ್‌ಎಸ್‌ಎಸ್ ಸರ್ಕಾರವೇ? ಎಂದು ಆಡಳಿತ ಪಕ್ಷದ ಹಿರಿಯ ನಾಯಕ ಹಾಗೂ ವಿಧಾನ ಪರಿಷತ್ ಸದಸ್ಯ ಡಿ.ಕೆ. ಹರಿಪ್ರಸಾದ್ ಇಂದಿಲ್ಲಿ ಪ್ರಶ್ನಿಸಿದ್ದಾರೆ.

ರಾಜ್ಯದಲ್ಲಿ ಗೋಧ್ರಾ ರೀತಿ ಘಟನೆ ನಡೆಸಲು ಸಂಚು ರೂಪಿಸಲಾಗುತ್ತಿದೆ ಎಂದು ಹರಿಪ್ರಸಾದ್ ನೀಡಿದ ಹೇಳಿಕೆ ಸಂಬಂಧ ಮಾಹಿತಿ ಪಡೆಯಲು ಸಿಸಿಬಿ ಪೊಲೀಸರು ಕುಮಾರ ಕೃಪಾ ಅತಿಥಿ ಗೃಹದಲ್ಲಿ ಅವರ ವಿಚಾರಣೆ ನಡೆಸಿದರು.

ವಿಚಾರಣೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಹರಿಪ್ರಸಾದ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಆ ಪಕ್ಷದ ಸಂಸದ ಅನಂತಕುಮಾರ್ ಹೆಗಡೆ ಅವರನ್ನು ಪ್ರಶ್ನಿಸದ ಈ ಸರ್ಕಾರ ನನ್ನನ್ನು ಪ್ರಶ್ನೆ ಮಾಡಲು ಪೊಲೀಸ್ ಕಳುಹಿಸಿದೆ ಎಂದು ಕಿಡಿ ಕಾರಿದರು. ನನಗೇನು ವಿಐಪಿ ಟ್ರೀಟ್‌ಮೆಂಟ್ ಬೇಡ, ಬಂಧಿಸಿ ಕರೆದುಕೊಂಡು ಹೋಗಿ, ಮಂಪರು ಪರೀಕ್ಷೆ ಮಾಡಿಸಿ ಎಂದು ಹೇಳಿದ್ದೇನೆ.

ಬಿಜೆಪಿ ನಾಯಕರು ಮನಬಂದಂತೆ ಹೇಳಿಕೆ ನೀಡುತ್ತಿದ್ದರೂ ಈ ಸರ್ಕಾರ ಅವರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ, ಆದರೆ ನಮ್ಮದೇ ಸರ್ಕಾರ ನನ್ನ ಮೇಲೆ ತನಿಖೆ ನಡೆಸುತ್ತಿದೆ, ಇದೇನು ಆರ್‌ಎಸ್‌ಎಸ್ ಸರ್ಕಾರವೇ. ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಲಿ ಜೊತೆಗೆ ವಿಜಯೇಂದ್ರ, ಅವರನ್ನೂ ಕರೆಸಿ ಮಂಪರು ಪರೀಕ್ಷೆ ಮಾಡಿಸಲಿ ಎಂದು ಕಿಡಿಕಾರಿದ ಹರಿಪ್ರಸಾದ್, ನನ್ನ ಸ್ಥಿತಿಯೇ ಹೀಗಾದರೆ, ಕಾಂಗ್ರೆಸ್ ಕಾರ್ಯಕರ್ತರ ಸ್ಥಿತಿ ಹೇಗಿರಬೇಕು ಎಂದಿದ್ದಾರೆ.

# ಸುವರ್ಣ ಕರ್ನಾಟಕ ವೇದಿಕೆಯಿಂದ ನೂತನ ಧ್ವಜಕಂಬ, ರಾಜ್ಯೋತ್ಸವ ಆಚರಣೆ



ದಾವಣಗೆರೆ, ಜ. 19- ನಗರದ ಕಲ್ಪತರು ಮಿನಿ ಸಮುದಾಯ ಭವನದ ಹತ್ತಿರ ನಿಟುವಳ್ಳಿ ರಸ್ತೆ ಸುವರ್ಣ ಕರ್ನಾಟಕ ವೇದಿಕೆಯಿಂದ ಭೈರಪ್ಪನವರ ಸ್ಮರಣಾರ್ಥ ನೂತನ ಧ್ವಜಸ್ತಂಬ ಹಾಗೂ 64ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳು ನೂತನ ಸ್ತಂಭವನ್ನು ಧ್ವಜಾರೋಹಣ ನರೆವೇರಿಸಿ ಮಾತನಾಡಿ, ದಿ. ಭೈರಪ್ಪನವರು ನಗರಸಭಾ ಸದಸ್ಯರು ಹಾಗೂ ಅಧ್ಯಕ್ಷರಾಗಿ ಸಾರ್ವಜನಿಕ ಸೇವೆಯನ್ನು ಸಲ್ಲಿಸಿದ್ದಾರೆ ಎಂದು ಸ್ಮರಸಿದರು. ನೂತನ ಧ್ವಜಸ್ತಂಭದಿಂದ ಈ ಭಾಗದಲ್ಲಿ ಕನ್ನಡ ಬೆಳೆಸಲು ಅನುಕೂಲಕರವಾಗುತ್ತದೆ ಎಂದು ಹೇಳಿದರು.

ನಿಜವಾದ ನಮ್ಮ ಕನ್ನಡ ಕುಲದೇವತೆ ಭುವನೇಶ್ವರಿ ಅನುಗ್ರಹ ನಮ್ಮ ಕನ್ನಡ ನಾಡು, ನುಡಿಗಾಗಿ ಎಲ್ಲಾ ಕನ್ನಡಿಗರ ಹೃದಯ ಮಿಡಿಯುತ್ತಿದೆ ಹಾಗಾಗಿ ಈ ನಾಡಿನ ನೆಲ ಜಲ ಭಾಷೆಗಾಗಿ ಉಳುವಿಗಾಗಿ ನೀವೆಲ್ಲಾ ಹೋರಾಟ ಮಾಡಬೇಕಿದೆ. ಎಲ್ಲಾ ಕವಿ ಪ್ರಮುಖರು ಕೂಡ ತಮ್ಮ ಕನ್ನಡ ನಾಡು ನುಡಿಗಾಗಿ ಹೃದಯ ಕನ್ನಡಕ್ಕಾಗಿ ಜೀವ ಮಿಡಿಯುತ್ತಿದ್ದು ಜೀವನ ಪರ್ಯಂತ ಜೀವನ ಮಿಡಿತವನ್ನು ಕನ್ನಡ ನಾಡಿನ ಎಲ್ಲಾ ಜೀವಂತ ಸಾರ್ಥಕತೆಗೆ ಫಲವನ್ನು ಕೊಟ್ಟಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್, ರಾಜೇಶ್, ಬಿ. ಶ್ರೀನಿವಾಸ್, ಹೋಟೆಲ್ ಶಾಂತಕುಮಾರ್, ದೊಡ್ಮನಿ ಸುರೇಶ್, ಮಂಜುನಾಥ್ ರಾಜು, ರುದ್ರೇಶ್, ನಮ್ಮ ಜೈ ಕರುನಾಡು ವೇದಿಕೆಯ ರಾಜ್ಯಾಧ್ಯಕ್ಷ ಮಂಜುನಾಥ್ ಗೌಡ, ಶಿವಣ್ಣ ಸುಂಕಾಪುರ್, ರುದ್ರಪ್ಪ ಮತ್ತು ಇತರರು ಭಾಗವಹಿಸಿದ್ದರು.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ ದುರುಗಮ್ಮನವರ ಪೌತಿ ಮಕ್ಕಳಾದ (1) ಪರಸಪ್ಪ (2) ನಾರಾಯಣಪ್ಪ. ಹೆಚ್. (3) ದುರುಗೇಶ.ಹೆಚ್ (4) ಹನುಮಂತ.ಹೆಚ್. (5) ಶಂಕರ್.ಹೆಚ್. (6) ಯಲ್ಲಪ್ಪ.ಹೆಚ್, (7) ಸಾಯಿಬಾಬಾ, ಹೆಚ್. ಮತ್ತು ಮರಿಯಪ್ಪನವರ ಮಕ್ಕಳಾದ ನಾಗರಾಜ ಚನ್ನದಾಸರ ಮತ್ತು ಸಣ್ಣ ದುರುಗಪ್ಪನ ಮಗನಾದ ಗೋವಿಂದಪ್ಪ ಚನ್ನದಾಸರ ರವರು ಹೊಸ ಕುಂದುವಾಡ, ದಾಸರಟ್ಟಿ, ಉಪ್ಪಾರಟ್ಟೆ, ಹಗರಿಬೊಮ್ಮನಹಳ್ಳಿ ವಾಸವಿರುವ ಇವರು ನೀಡಿದ ಮಾಹಿತಿ ಮೇರೆಗೆ ದುರುಗಮ್ಮ, ನಾಗರಾಜ, ದಾಸರ ಗೋವಿಂದಪ್ಪ ಇವರ ಹೆಸರಿಗೆ 21.01.2018 ರಂದು ಎಮ್.ಆರ್ ನಂ. ಹೆಚ್ 17 ರಲ್ಲಿ ಪೌತಿ ಖಾತೆ ನಂತರ, 2023-24ರ ಸಾಲಿನ ಪಹಣಿ ಪತ್ರಿಕೆ ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಜರೀಕಟ್ಟೆ ಗ್ರಾಮದ ಸ.ನಂ.45/1 ರಲ್ಲಿ ಖಾತೆ ನಂ.23ರಲ್ಲಿ 2 ಎಕರೆ 10 ಗುಂಟೆ ಮತ್ತು ಸ.ನಂ.45/4 ರಲ್ಲಿ ಖಾತೆ ನಂ.23 ರಲ್ಲಿ 0-36 ಗುಂಟೆ ಆಗಿದ್ದು, ಇವರುಗಳು ಜರೀಕಟ್ಟೆ ಗ್ರಾಮದಿಂದ ಸುಮಾರು 30 ವರ್ಷಕ್ಕೂ ಹೆಚ್ಚು ಹೊರಪ್ರದೇಶದಲ್ಲಿ ವಾಸವಿದ್ದು, ಜೀವನ ನಡೆಸಿಕೊಂಡು ಬಂದು ದಿ: 08.01.2024ರಂದು ಮೇಲೆ ಹೇಳಿದ ಜಮೀನುಗಳ ನೋಡಲಾಗಿ, ಸದರಿ ಜಮೀನಿನಲ್ಲಿ ಅಂದಾಜು 60ಕ್ಕೂ ಹೆಚ್ಚು ಮನೆಗಳು ಕಟ್ಟಿದ್ದು ಕಂಡುಬಂದು ಸದರಿ ಮನೆಯವರಿಗೆ ವಿಚಾರಿಸಲಾಗಿ, ಸದರಿಯವರಿಗೆ ಮೇಲ್ಕಂಡ ಜಮೀನು ಯಾರು ನೀಡಿದರು ಮತ್ತು ಮನೆ ಕಟ್ಟಿಕೊಂಡವರಿಗೆ ಯಾವ ಮಾಲೀಕತ್ವ, ಯಾವ ಪತ್ರಮುಖೇನ ಬಂದಿದೆ ಎಂದು ವಿಚಾರಿಸಲಾಗಿ, ಸದರಿ ಮನೆಗಳನ್ನು ಕಟ್ಟಿಕೊಂಡವರು ಸರಿಯಾದ ಉತ್ತರ ನೀಡದೇ, ಹಾರಿಕೆ ಉತ್ತರ ನೀಡಿದ್ದನ್ನು ನೋಡಿದರೆ ಸದರಿ ಮನೆಗಳನ್ನು ಕಟ್ಟಿಕೊಂಡವರು ಅಕ್ರಮವಾಗಿ ಕಟ್ಟಿಕೊಂಡಿದ್ದಾರೆಯೇ ಎಂದು ನನ್ನ ಕಕ್ಷಿದಾರರು ತಿಳಿದು, **ಸದರಿ ಮನೆಗಳನ್ನು ಕಟ್ಟಿಕೊಂಡವರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ, ದಿನಾಂಕ 31.01.2024 ರೊಳಗಾಗಿ ಮನೆ ಕಟ್ಟಿಕೊಂಡವರು ತಮ್ಮಲ್ಲಿರುವ ಮನೆಗಳನ್ನು ಕಟ್ಟಿಕೊಂಡಿದ್ದಕ್ಕೆ ಯಾವುದೇ ದಾಖಲೆಗಳು ಇದ್ದಲ್ಲಿ, ಕೆಳಕಾಣಿಸಿದ ವಿಳಾಸಕ್ಕೆ ನೀಡುವುದು ಮತ್ತು ಸದರಿ ಮನೆಗಳನ್ನು ಕೆಡವಿ ಖಾಲಿ ಜಾಗವನ್ನು ಬಿಟ್ಟು ಹೋಗಬೇಕೆಂದು, ಹೋಗದೇ ಇದ್ದಲ್ಲಿ, ನನ್ನ ಕಕ್ಷಿದಾರರು ಸದರಿ ಮನೆಗಳನ್ನು ತೆರವು ಮಾಡಲು ಸೂಕ್ತ ಉಪಕರಣ ಮತ್ತು ಯಂತ್ರಗಳನ್ನು ತಂದು ತೆರವು ಮಾಡಿಸುವುದಾಗಿ ತಿಳಿಸಿರುತ್ತಾರೆ ಎಂದು ಈ ಮೂಲಕ ಸಾರ್ವಜನಿಕರಿಗೆ ಮತ್ತು ಸದರಿ ಮೇಲೆ ಹೇಳಿದ ಜಮೀನುಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವವರ ಗಮನಕ್ಕೆ ಈ ಮೂಲಕ ಎಚ್ಚರಿಸಿರುತ್ತಾರೆ.**

**ಡಾ।। ರೇವಣ್ಣ ಬಳ್ಳಾರಿ,**
ಎಂ.ಎ., ಎಲ್.ಎಲ್.ಬಿ., ಸಿ.ಸಿ.ಲಾ,
ನ್ಯಾಯವಾದಿ, # 421, ವಾಲಿ ಬಿಲ್ಡಿಂಗ್,
ಲಾಯರ್ ರಸ್ತೆ, ಕೆ.ಬಿ. ಬಡಾವಣೆ,
ದಾವಣಗೆರೆ - 577 002.
ಮೊ.: 9448339322, 9632322652

ಕಕ್ಷಿದಾರರು :
ಪರಸಪ್ಪ
ನಾಗರಾಜ S/o. ಮರಿಯಪ್ಪ
ಗೋವಿಂದಪ್ಪ ದಾಸರ

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ **ಶ್ರೀ ಲಿಂಗರಾಜ್ ನಾಯ್ಕ ಹೆಚ್.ಕೆ. ಬಿನ್ ಕೃಷ್ಣ ನಾಯ್ಕ**, ವಯಸ್ಸು : ಸುಮಾರು 40 ವರ್ಷ, ವಾಸ : ಹೊನ್ನನಾಯಕನಹಳ್ಳಿ ಗ್ರಾಮ, ನರಗನಹಳ್ಳಿ ಅಂಚೆ, ದಾವಣಗೆರೆ ತಾಲ್ಲೂಕು & ಜಿಲ್ಲೆ (ಜನರಲ್ ಪವರ್ ಆಫ್ ಅಟಾರ್ನಿ ಹೋಲ್ಡರ್) ಶ್ರೀ ಎನ್.ಆರ್. ಲಕ್ಷ್ಮೀಕಾಂತ್ ಬಿನ್ ಲೇ।। ನೀಲರಂಗಪ್ಪ, ವಾಸ : # 25, 1ನೇ ಮೇನ್, 7ನೇ ಕ್ರಾಸ್, ಎಲ್.ಡಿ. ಬ್ಲಾಕ್, ಗಂಗಾನಗರ, ಬೆಂಗಳೂರು ಇವರುಗಳು ನೀಡಿದ ಮಾಹಿತಿ ಹಾಗೂ ದಾಖಲೆಗಳ ಆಧಾರದ ಮೇಲೆ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ ಏನೆಂದರೆ, ಈ ಮೇಲ್ಕಂಡ ನನ್ನ ಕಕ್ಷಿದಾರರುಗಳಾದ ಇವರು ಈ ಹಿಂದೆ **(1) ಶ್ರೀ ಬಿ.ಟಿ. ಷಡಕಪ್ಪ ಬಿನ್ ಲೇ।। ಸಿದ್ದಪ್ಪ, (2) ಶ್ರೀಮತಿ ಸರೋಜಮ್ಮ ಕೋಂ ಬಿ.ಟಿ. ಷಡಕಪ್ಪ, (3) ಶ್ರೀ ಬಿ.ಎಸ್. ಸಿದ್ದೇಶ್ ಬಿನ್ ಬಿ.ಟಿ. ಷಡಕಪ್ಪ, (4) ಟಿ.ಎಸ್. ಚೈತ್ರ ತಂದೆ : ಬಿ.ಟಿ. ಷಡಕಪ್ಪ, (5) ಶಂಭುಲಿಂಗಪ್ಪ ಬಿನ್ ಲೇ।। ಸಿದ್ದಪ್ಪ, (6) ಶ್ರೀಮತಿ ಕರಿಬಸಮ್ಮ ಕೋಂ ಶಂಭುಲಿಂಗಪ್ಪ, (7) ಶ್ರೀಮತಿ ಗೌರಮ್ಮ ತಂದೆ : ಶಂಭುಲಿಂಗಪ್ಪ, (8) ಶ್ರೀ ರುದ್ರೇಶ್ ಬಿನ್ ಶಂಭುಲಿಂಗಪ್ಪ, (9) ಶ್ರೀ ಸಿದ್ದೇಶ್ ಬಿನ್ ಶಂಭುಲಿಂಗಪ್ಪ, (10) ಶ್ರೀ ಬಿ.ಟಿ. ರೇವಣಸಿದ್ದಪ್ಪ ಬಿನ್ ಲೇ।। ಸಿದ್ದಪ್ಪ, (11) ಶ್ರೀಮತಿ ಸುನೀತಾ ಕೋಂ ಬಿ.ಟಿ. ರೇವಣಸಿದ್ದಪ್ಪ, (12) ಶ್ರೀ ಮಹೇಂದ್ರ ಬಿನ್ ಬಿ.ಟಿ. ರೇವಣಸಿದ್ದಪ್ಪ, (13) ಶ್ರೀ ಬಿ. ತಿಪ್ಪೇಸ್ವಾಮಿ ಬಿನ್ ಲೇ।। ಬಸಪ್ಪ, (14) ಶ್ರೀಮತಿ ಗಿರಿಜಾ ಕೋಂ ಬಿ. ತಿಪ್ಪೇಸ್ವಾಮಿ, (15) ಟಿ. ಶ್ರೀನಿವಾಸ ಬಿನ್ ಬಿ. ತಿಪ್ಪೇಸ್ವಾಮಿ, (16) ಶ್ರೀಮತಿ ನಂದಿನಿ ತಂದೆ : ತಿಪ್ಪೇಸ್ವಾಮಿ, ಕ್ರ.ಸಂ. 01 ರಿಂದ 16 ರವರೆಗಿನವರ ವಾಸ : ಬಸಾಪುರ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು & ಜಿಲ್ಲೆ ಹಾಗೂ (17) ಶ್ರೀ ಎ.ಆರ್. ವಿಜಯಕುಮಾರ್ ಬಿನ್ ಎ.ಆರ್. ಬಸಪ್ಪ, (18) ಶ್ರೀಮತಿ ಮಮತಾ ಕೋಂ ಎ.ಆರ್. ವಿಜಯಕುಮಾರ್, ಕ್ರ.ಸಂ. 17 ಮತ್ತು 18 ರವರ ವಾಸ : ಆನೆಕೊಂಡ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು & ಜಿಲ್ಲೆ. ಈ ಮೇಲ್ಕಂಡ ಕ್ರ.ಸಂ. 1 ರಿಂದ 18 ರ ವರೆಗಿನವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ತೋರಿಸಿರುವ ಪರಿಶಿಷ್ಟ ಜಮೀನುಗಳನ್ನು ನನ್ನ ಕಕ್ಷಿದಾರರಿಗೆ ಈ ಹಿಂದೆ ಮಾರಾಟ ಮಾಡಲು ಇಚ್ಚಿಸಿ, ಅಂದಿನ ಮಾರ್ಕೆಟ್ ಬೆಲೆಯನ್ನು ನಿಗದಿಪಡಿಸಿ ನನ್ನ ಕಕ್ಷಿದಾರರಿಂದ ಮುಂಗಡವಾಗಿ ಹಣವನ್ನು ಪಡೆದು ಸದರಿ ಷೆಡ್ಯೂಲ್ ಸೊತ್ತುಗಳ ಕ್ರಯದ ಕರಾರು ಪತ್ರವನ್ನೂ ಸಹ ಸಾಕ್ಷಿದಾರರ ಸಮಕ್ಷಮದಲ್ಲಿ ಬರೆದುಕೊಟ್ಟಿರುತ್ತಾರೆ.** ಕಾಲಕ್ರಮೇಣ ಈ ಮೇಲ್ಕಂಡ ಕ್ರ.ಸಂ. 1 ರಿಂದ 18 ರವರೆಗಿನ ವ್ಯಕ್ತಿಗಳು ಒಂದಿಲ್ಲೊಂದು ಕಾರಣವನ್ನು ಹೇಳುತ್ತಾ ಈ ಕೆಳಕಂಡ ಪರಿಶಿಷ್ಟದಲ್ಲಿ ವಿವರಿಸಿರುವ ಸೊತ್ತುಗಳನ್ನು ನೋಂದಾಯಿಸಿಕೊಡದೇ ಕಾಲಹರಣ ಮಾಡುತ್ತಾ ಬಂದಿದ್ದು, ಈಗ ತಮ್ಮ ಹೆಸರಿಗಿರುವ ಪರಿಶಿಷ್ಟ ಸೊತ್ತುಗಳನ್ನು ಬೇರೊಬ್ಬರ ಹೆಸರಿಗೆ ಮಾರಾಟ/ಪರಭಾರೆ/ಅಡಮಾನ ಇತ್ಯಾದಿ ದಾಖಲೆಗಳನ್ನು ಮಾಡಿಕೊಡುವ ಹುನ್ನಾರದಲ್ಲಿರುತ್ತಾರೆ. ಎಂಬ ವರ್ತಮಾನವು ನನ್ನ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಸಾರ್ವಜನಿಕರಲ್ಲಿ ಈ ಸಾರ್ವಜನಿಕ ಪತ್ರಿಕಾ ಪ್ರಕಟಣೆ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ಕ್ರ.ಸಂ. 1 ರಿಂದ 18 ರ ವರೆಗಿನ ವ್ಯಕ್ತಿಗಳೊಂದಿಗೆ **ಈ ಕೆಳಕಂಡ ಪರಿಶಿಷ್ಟದಲ್ಲಿ ವಿವರಿಸಿರುವ ಸೊತ್ತುಗಳ ವಿಷಯದಲ್ಲಿ ಯಾರೊಬ್ಬರೂ ಕೂಡಾ ಸದರಿ ಜಮೀನುಗಳಿಗೆ/ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾರಾಟ, ಪರಭಾರೆ, ಕ್ರಯ ಪ್ರಕ್ರಿಯೆಯಲ್ಲಿ ಭಾಗವಹಿಸಬಾರದೆಂದು ಈ ಪತ್ರಿಕಾ ಪ್ರಕಟಣೆ ಮೂಲಕ ಸೂಚಿಸಲಾಗಿದೆ.** ಒಂದು ವೇಳೆ ಹಾಗೇನಾದರೂ ಸದರಿ ಪರಿಶಿಷ್ಟದಲ್ಲಿ ವಿವರಿಸಿರುವ ಆಸ್ತಿಗಳನ್ನು ಕ್ರಯ ಮತ್ತು ಇತರೆ ಯಾವುದೇ ರೂಪದಲ್ಲಿ ಪಡೆದುಕೊಂಡಲ್ಲಿ ಅದಕ್ಕೆ ಆಗುವ **ಕಾನೂನು ಬದ್ಧ ಲುಕ್ಸಾನುಗಳಿಗೆ ತಾವೇ ನೇರ ಜವಾಬ್ದಾರರಾಗಿರುತ್ತೀರಿ ಒಂದು ವೇಳೆ ಈ ಸಾರ್ವಜನಿಕ ಪ್ರಕಟಣೆಯನ್ನು ಉಲ್ಲಂಘಿಸಿ, ತಾವೇನಾದರೂ ಪರಿಶಿಷ್ಟದಲ್ಲಿ ವಿವರಿಸಿರುವ ಸೊತ್ತುಗಳ ವಿಷಯದಲ್ಲಿ ಮಾರಾಟ, ಪರಭಾರೆ, ಅಡಮಾನ ಮತ್ತು ಇತ್ಯಾದಿ ಪ್ರಕ್ರಿಯೆಯಿಂದ ನನ್ನ ಕಕ್ಷಿದಾರರಿಗೆ ಯಾವುದೇ ಬಾಧಕವಾಗುವುದಿಲ್ಲ** ಎಂದು ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಯಪಡಿಸಲಾಗಿದೆ. ಸಿವಿಲ್ ವ್ಯಾಜ್ಯಕ್ಕೆ ಒಳಪಡುವ ಷೆಡ್ಯೂಲ್ ಸೊತ್ತಿನ ಆಸ್ತಿಯ ವಿವರಗಳು ಈ ಕೆಳಕಂಡಂತಿವೆ.

**-: ಪರಿಶಿಷ್ಟ ಷೆಡ್ಯೂಲ್ ಸೊತ್ತುಗಳು :-**

1) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರೀ.ಸರ್ವೆ ನಂ.93/5ಎ ರ ವಿಸ್ತೀರ್ಣ : ಎಕರೆ-ಇಲ್ಲಾ, ಗುಂಟೆ-30 ವುಳ್ಳ ಜಮೀನಿಗೆ ಚಕ್ಕುಬಂದಿ :- ಪೂರ್ವಕ್ಕೆ : ಚನ್ನಬಸಮ್ಮನವರ ಜಮೀನು, ಪಶ್ಚಿಮಕ್ಕೆ : ಸಿದ್ದಪ್ಪನವರ ಜಮೀನು, ಉತ್ತರಕ್ಕೆ : ಗಂಗಾಧರಪ್ಪನವರ ಜಮೀನು, ದಕ್ಷಿಣಕ್ಕೆ : ನಾಗಪ್ಪನವರ ಜಮೀನು.

2) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರೀ.ಸರ್ವೆ ನಂ.93/5ಪಿ1 ರ ವಿಸ್ತೀರ್ಣ : ಎಕರೆ-ಇಲ್ಲಾ, ಗುಂಟೆ-08 ವುಳ್ಳ ಜಮೀನಿಗೆ ಚಕ್ಕುಬಂದಿ :- ಪೂರ್ವಕ್ಕೆ : ರಾಜಶೇಖರಪ್ಪನವರ ಜಮೀನು, ಪಶ್ಚಿಮಕ್ಕೆ : ಷಡಕಪ್ಪ ಹಾಗೂ ಅವರ ಅಣ್ಣ-ತಮ್ಮಂದಿರ ಜಮೀನು, ಉತ್ತರಕ್ಕೆ : ಶಂಭುಲಿಂಗಪ್ಪನವರ ಜಮೀನು, ದಕ್ಷಿಣಕ್ಕೆ : ರಾಜಶೇಖರಪ್ಪನವರ ಜಮೀನು.

3) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರೀ.ಸರ್ವೆ ನಂ. 89 ರ ವಿಸ್ತೀರ್ಣ : ಎಕರೆ-02, ಗುಂಟೆ-35 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ರೇವಕ್ಕ ಬಸಪ್ಪನವರ ಜಮೀನು, ಪಶ್ಚಿಮಕ್ಕೆ : ಸಿದ್ದಪ್ಪ ಮತ್ತು ರೇವಕ್ಕ ಬಸಪ್ಪನವರ ಜಮೀನು, ಉತ್ತರಕ್ಕೆ : ಚಾನಲ್ ರಸ್ತೆ, ದಕ್ಷಿಣಕ್ಕೆ : ನಾಗಪ್ಪನಿಗೆ ಸೇರಿದ ರಿ.ಸ.ನಂ. 93/5ಪಿ ರ ಜಮೀನು.

4) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರೀ.ಸರ್ವೆ ನಂ. 90 ರ ವಿಸ್ತೀರ್ಣ : ಎಕರೆ-02, ಗುಂಟೆ-34 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಶಂಭುಲಿಂಗಪ್ಪನವರ ಜಮೀನು, ಪಶ್ಚಿಮಕ್ಕೆ : ಚನ್ನಬಸಪ್ಪನವರ ಜಮೀನು, ಉತ್ತರಕ್ಕೆ : ರೇವಕ್ಕ ಬಸಪ್ಪನವರ ಜಮೀನು, ದಕ್ಷಿಣಕ್ಕೆ : ಚನ್ನಬಸಮ್ಮನವರ ಜಮೀನು.

5) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರೀ.ಸರ್ವೆ ನಂ. 91 ರ ವಿಸ್ತೀರ್ಣ : ಎಕರೆ-01, ಗುಂಟೆ-14 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಹಯಾತ್‌ಸಾಬ್ ಜಮೀನು, ಪಶ್ಚಿಮಕ್ಕೆ : ಹಳ್ಳ, ಉತ್ತರಕ್ಕೆ : ತವಡೂರು ಸಿದ್ದಪ್ಪನವರ ಜಮೀನು, ದಕ್ಷಿಣಕ್ಕೆ : ಯಲಿಗಾರ್ ಸಿದ್ದಪ್ಪನವರ ಜಮೀನು.

6) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರೀ.ಸರ್ವೆ ನಂ. 93/4ಪಿ3 ರ ವಿಸ್ತೀರ್ಣ : ಎಕರೆ-02, ಗುಂಟೆ-18 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಕೊರಚರು ಜಮೀನು, ಪಶ್ಚಿಮಕ್ಕೆ : ಶಂಭಣ್ಣನವರ ಜಮೀನು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಮಂಜಪ್ಪನವರ ಜಮೀನು.

7) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರೀ.ಸರ್ವೆ ನಂ. 88/1 ರ ವಿಸ್ತೀರ್ಣ : ಎಕರೆ-ಇಲ್ಲಾ, ಗುಂಟೆ-34 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಶಂಭಣ್ಣನವರ ಜಮೀನು, ಪಶ್ಚಿಮಕ್ಕೆ : ಚನ್ನಬಸಪ್ಪನವರ ಜಮೀನು, ಉತ್ತರಕ್ಕೆ : ಗೌರಮ್ಮನವರ ಜಮೀನು, ದಕ್ಷಿಣಕ್ಕೆ : ಷಡಕಪ್ಪ ಮತ್ತು ಇತರೆಯವರ ಜಮೀನು.

ಕಕ್ಷಿದಾರರ ಪರ ವಕೀಲರು :
**ಶ್ರೀಯುತ ಕೆ.ಜಿ.ಕೆ. ಸ್ವಾಮಿ ಮತ್ತು ಶ್ರೀ ಎಂ. ಕುಮಾರ ನಾಯ್ಕ**
ನ್ಯಾಯವಾದಿಗಳು, 'ಲಾ ಸಲ್ಯೂಷನ್ಸ್', ನಂ.417, 1ನೇ ಮಹಡಿ, 'ಬೆನಕೇಶ್ ಪ್ಲಾಜಾ'
ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ.
ಮೊಬೈಲ್ : 9844413266 / 9880847776

ಸ್ಥಳ : ದಾವಣಗೆರೆ
ದಿನಾಂಕ : 19-01-2024

## ಸಮರದ ಬಗ್ಗೆ ಇಸ್ರೇಲ್‌ನಲ್ಲಿ ಭಿನ್ನಮತ

ಜೆರುಸಲೇಂ, ಜ. 19 – ಗಾಜಾದಲ್ಲಿ ಹಮಾಸ್ ವಿರುದ್ಧದ ಯುದ್ಧ ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಇಸ್ರೇಲ್‌ನ ಉನ್ನತ ಅಧಿಕಾರಿಗಳಲ್ಲಿ ಭಿನ್ನಮತ ಉಂಟಾಗಿದೆ.

ಇಸ್ರೇಲ್ ಸಮರ ಸಂಪುಟದ ನಾಲ್ವರು ಸದಸ್ಯರಲ್ಲಿ ಒಬ್ಬರಾಗಿರುವ ಸೈನ್ಯದ ಮಾಜಿ ಮುಖ್ಯಸ್ಥ ಈಸೆಂಕೋಟ್ ಹೇಳಿಕೆ ನೀಡಿದ್ದು, ಕದನ ವಿರಾಮದ ಮೂಲಕ ಮಾತ್ರ ಇಸ್ರೇಲ್ ಒತ್ತೆಯಾಳುಗಳನ್ನು ಬಿಡಿಸಿಕೊಂಡು ಬರಲು ಸಾಧ್ಯ ಎಂದಿದ್ದಾರೆ.

ಒತ್ತೆಯಾಳುಗಳ ಬಿಡುಗಡೆ ಜೊತೆಗೆ, ಯುದ್ಧ ಸಾಗುತ್ತಿರುವ ದಿಕ್ಕಿನ ಬಗ್ಗೆಯೂ ಪರಿಗಣಿಸುತ್ತಿದ್ದೇನೆ. ಪರಿಸ್ಥಿತಿ ಒಂದು ಹಂತ ದಾಟಿದರೆ ಸಮರ ಸಂಪುಟದಿಂದ ಹೊರ ಬರಲು ಪರಿಶೀಲಿಸುತ್ತೇನೆ ಎಂದೂ ಅವರು ಹೇಳಿದ್ದಾರೆ.

ಹಮಾಸ್ ವಿರುದ್ಧದ ಯುದ್ಧ ಈಗ ನಾಲ್ಕನೇ ತಿಂಗಳಿಗೆ ಕಾಲಿಟ್ಟಿದೆ. ಯುದ್ಧ ಯಾವ ದಿಸೆಯಲ್ಲಿ ಮುಂದುವರೆಸಬೇಕು ಎಂಬ ಬಗ್ಗೆ ರಾಜಕೀಯ ಹಾಗೂ ಸೈನಿಕ ನಾಯಕರಲ್ಲಿ ಭಿನ್ನತೆ ಕಂಡು ಬರುತ್ತಿದೆ.

ಹಮಾಸ್ ಉಗ್ರರ ವಶದಲ್ಲಿ 130ಕ್ಕೂ ಹೆಚ್ಚು ಇಸ್ರೇಲಿ ಒತ್ತೆಯಾಳುಗಳಿದ್ದಾರೆ. ಆದರೆ, ಇವರಲ್ಲಿ ಹಲವರು ಬದುಕುಳಿದಿಲ್ಲ ಎನ್ನಲಾಗುತ್ತಿದೆ.

ಯುದ್ಧದ ತೀವ್ರತೆ ತಗ್ಗಿಸಬೇಕು ಹಾಗೂ ಯುದ್ಧದ ನಂತರ ಪ್ಯಾಲೆಸ್ತೇನ್ ಸರ್ಕಾರ ನೆಲೆಗೊಳಿಸಬೇಕು ಎಂದು ಅಮೆರಿಕ ತಿಳಿಸಿದೆ. ಆದರೆ, ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ಅವರು ಈ ಸಲಹೆಯನ್ನು ಒಪ್ಪುತ್ತಿಲ್ಲ.

ಯುದ್ಧ ಸಾಕಷ್ಟು ದಿನಗಳ ಕಾಲ ಎಳೆಯುತ್ತಿರುವಂತೆಯೇ, ಇಸ್ರೇಲ್ ವಿರುದ್ಧ ಹತ್ಯಾಕಾಂಡದ ಆರೋಪಗಳು ಕೇಳಿ ಬರುತ್ತಿವೆ. ಯುದ್ಧ ಮುಂದುವರೆಸುವುದರಿಂದ ನೇತನ್ಯಾಹು ಬಯಸಿರುವ ಗುರಿ ತಲುಪಲು ಸಾಧ್ಯವಾಗದೇ ಇರಬಹುದು ಎಂದು ಇಸ್ರೇಲ್‌ನಲ್ಲಿನ ಅವರ ವಿರೋಧಿಗಳು ಹೇಳುತ್ತಿದ್ದಾರೆ. ಈ ನಡುವೆ, ಇಸ್ರೇಲ್‌ನಲ್ಲಿ ನೇತನ್ಯಾಹು ಅವರ ಜನಪ್ರಿಯತೆ ಕುಸಿಯುತ್ತಿದೆ.

# ಬೋಯಿಂಗ್ ತಾಂತ್ರಿಕ ಕೇಂದ್ರ ಉದ್ಘಾಟಿಸಿದ ಪ್ರಧಾನಿ

ಬೆಂಗಳೂರು, ಜ. 19 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬೋಯಿಂಗ್ ಕಂಪನಿಯ ನೂತನ ಜಾಗತಿಕ ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಕೇಂದ್ರವನ್ನು ಉದ್ಘಾಟಿಸಿದ್ದಾರೆ.

1,600 ಕೋಟಿ ರೂ. ವೆಚ್ಚದಲ್ಲಿ 43 ಎಕರೆ ಪ್ರದೇಶದಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ. ಬೋಯಿಂಗ್ ಇಂಡಿಯಾ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಸೆಂಟರ್ (ಬಿ.ಐ.ಇ.ಟಿ.ಸಿ.) ಅಮೆರಿಕದ ಹೊರಗೆ ಕಂಪನಿ ಮಾಡಿರುವ ಅತಿ ದೊಡ್ಡ ಹೂಡಿಕೆಯಾಗಿದೆ.

ನಗರದ ಹೊರಗಿನ ದೇವನಹಳ್ಳಿಯಲ್ಲಿರುವ ಉನ್ನತ ರಕ್ಷಣ ಹಾಗೂ ವೈಮಾನಿಕ ವಲಯದ ಪಾರ್ಕ್‌ನಲ್ಲಿ ಬೋಯಿಂಗ್ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇದೇ ವೇಳೆ ಪ್ರಧಾನಿ ಮೋದಿ ಅವರು ಬೋಯಿಂಗ್ ಸುಕನ್ಯ ಯೋಜನೆಗೂ



ಚಾಲನೆ ನೀಡಿದ್ದಾರೆ. ಈ ಯೋಜನೆಯ ಮೂಲಕ ದೇಶದ ವೈಮಾನಿಕ ವಲಯದಲ್ಲಿ ಹೆಚ್ಚು ಹೆಣ್ಣು ಮಕ್ಕಳನ್ನು ಕರೆ ತರಲು ಕಂಪನಿ ಉದ್ದೇಶಿಸಿದೆ.

ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಹಾಗೂ ಗಣಿತ (ಸ್ಟೆಮ್) ವಲಯಕ್ಕೆ ಅಗತ್ಯವಾದ ಕೌಶಲ್ಯಗಳನ್ನು ಬಾಲಕಿಯರು ಹಾಗೂ ಮಹಿಳೆಯರಿಗೆ ಕಲಿಸಲಾಗುವುದು. ವೈಮಾನಿಕ ವಲಯದ ಹುದ್ದೆಗಳಿಗೆ ಅಗತ್ಯ ತರಬೇತಿಯನ್ನೂ ನೀಡಲಾಗುವುದು ಎಂದು ಬೋಯಿಂಗ್ ಹೇಳಿಕೆಯಲ್ಲಿ ತಿಳಿಸಲಾಗಿದೆ. 150 ತಾಣಗಳಲ್ಲಿ

### ಬೋಯಿಂಗ್ ಸುಕನ್ಯ ಯೋಜನೆಗೂ ಚಾಲನೆ

ಸ್ಟೆಮ್ ಪ್ರಯೋಗಾಲಯ ಸ್ಥಾಪಿಸಲಾಗುವುದು. ಇದರಿಂದ ಯುವತಿಯರು ಸ್ಟೆಮ್ ವಲಯಕ್ಕೆ ಬರಲು ನೆರವಾಗಲಿದೆ. ಮಹಿಳೆಯರಿಗೆ ಪೈಲಟ್ ತರಬೇತಿಯನ್ನೂ ನೀಡಲಾಗುವುದು.

ಈ ಸಂದರ್ಭದಲ್ಲಿ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರತಿಪಕ್ಷದ ನಾಯಕ ಆರ್. ಅಶೋಕ್, ಬೋಯಿಂಗ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸ್ಟಿಫನಿ ಪೋಪ್ ಮತ್ತಿತರರು ಉಪಸ್ಥಿತರಿದ್ದರು.

## ಬಾಲರಾಮ

ಬಲ್ಲವರಾರಿಹರು....... ಶ್ರೀ ರಾಮನ
ಅರಿತವರಾರಿಹರು ಮಹಾ ಮಹಿಮನ
ಬಂದಿಹನು ರಾಮ ಸಪ್ತಮದವತಾರದಲಿ
ದಶರಥ ರಾಜನ ಸುತನಾಗಿ ಅಯೋಧ್ಯೆಯಲಿ!

ಪುತ್ರಕಾಮೇಷ್ಟಿ ಯಾಗದ ಪುಣ್ಯದ ಫಲವಿದು
ಮನು ಕುಲೋದ್ಧಾರಕ ದೇವರ ಮನಸಿದು
ಕೌಸಲ್ಯೆ ಮಾತೆಯ ಮಡಿಲಿನ್ನಲಾಡುತಲಿ
ನ್ಯಾಯ, ನೀತಿಯ ಬೆಳಕನು ಹರಡುತಲಿ!

ಲಕ್ಷ್ಮಣ, ಭರತ, ಶತೃಘ್ನರೊಡಗೂಡಿ ಶ್ರೀರಾಮ
ಸತ್ಯ ಧರ್ಮದೊಳಗಾಡುತಲಿ ಜಯರಾಮ
ಸದ್ಗುಣ ಸಂಪನ್ನ ಕುಲದೀಪಕ ಕೌಸಲ್ಯನಂದನ
ರಘುಕುಲ ತಿಲಕ ಜಗದೋದ್ಧಾರಕ ಆತ್ಮರಾಮ!

ಭರತ ಮಾತೆಯ ಮನದ ಮಹದಾಸೆಗೆ....
ಸೀತಾ ಲಕ್ಷ್ಮಣರೊಡಗೂಡಿ ರಾಮ ತೆರಳಿದ ಕಾಡಿಗೆ
ಪಿತೃ ಪರಿಪಾಲಕ ನಾರು ಮಡಿಯನ್ನುಟ್ಟು ರಾಮ
ಭರತನಿಗೆ ಪಟ್ಟಾಭಿಷೇಕ ಮಾಡಿಸಿದ ಮಹಾನಾಮ!

ವನವಾಸ ಮುಗಿಸಿ ಅಯೋಧ್ಯೆಗೆ ಮರಳಿದ ರಾಮ
ಪಟ್ಟಾಭಿಷಿಕ್ತನಾಗಿ ಸುಭೀಕ್ಷ ರಾಜ್ಯಬಾರದಲ್ಲಿ
ರಾಮ ರಾಜ್ಯವಾಯಿತು. ಸಗ್ಗದ ಮೇರು ವೈಭವದಲ್ಲಿ
ತ್ರೇತಾಯುಗದ ರಾಮನು ದೈವದ ಅವತಾರದಲಿ!

ಕುಶ ಲವರು ನಿರ್ಮಿಸಿದ ಶ್ರೀರಾಮ ಮಂದಿರವು
ಕಾಲಾತಿಕ್ರಮಣಕ್ಕೆ ಸಂಚದು ಧರ್ಮದಂಚಿನಲಿ
ಐದು ಶತಮಾನದ ರಾಮ ಭಕ್ತರೆಲ್ಲರ ಕನವರಿಕೆ
ಪುನಃರುತ್ಥಾನದಲಿ ನನಸಾಗಿ ಬೆಳಗಿತು ಮಂದಿರವು

ಅಯೋಧ್ಯೆ ಶ್ರೀರಾಮ ಜನ್ಮಪುಣ್ಯ ಭೂಮಿಯಲಿ
ಭವ್ಯ ದಿವ್ಯ ಸುಂದರ ಬಾಲ ರಾಮನ ಮಂದಿರವು
ಪ್ರಾಣ ಪ್ರತಿಷ್ಠಾಪನೆಯು ಮಹಾ ಉತ್ಕೃಷ್ಟತೆಯಲ್ಲಿ
ಭಕ್ತರೆಲ್ಲರ ಕನಸು ನನಸಾಗಿ ಜಗವನ್ನೆ ಸೆಳೆಯಿತು!!

– ವೀಣಾ ಕೃಷ್ಣಮೂರ್ತಿ ದಾವಣಗೆರೆ

## ಹರಿಹರದಲ್ಲಿ ಲಾರಿ ಚಾಲಕರ ಪ್ರತಿಭಟನೆ



ಹರಿಹರ, ಜ.19- ನಗರದಲ್ಲಿ ಲಾರಿ ಚಾಲಕರು ತಮ್ಮ ಹಲವಾರು ಬೇಡಿಕೆಗಳನ್ನು ಸರ್ಕಾರ ಆದಷ್ಟು ಬೇಗ ಈಡೇರಿಸುವಂತೆ ಆಗ್ರಹಿಸಿ ಲಾರಿ, ಗೂಡ್ಸ್ ವಾಹನ ಸೇರಿದಂತೆ ಹಲವು ವಾಹನಗಳ ಮೆರವಣಿಗೆ ಮೂಲಕ ತಹಶೀಲ್ದಾರ್ ಕಚೇರಿಗೆ ತೆರಳಿ ತಹಶೀಲ್ದಾರ್ ಬಸವರಾಜಯ್ಯ ಅವರಿಗೆ ಮನವಿ ಅರ್ಪಿಸಿದರು. ಈ ವೇಳೆ ಲಾರಿ ಚಾಲಕರ ಸಂಘದ ಅಧ್ಯಕ್ಷ ಯೂಸುಫ್ ಮಾತನಾಡಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಜಂಬಯ್ಯ, ಬಸಪ್ಪ, ಇಮ್ರಾನ್, ಜಪಾನ್ ರಫೀಕ್ ಸಾಬ್, ಹಿದಾಯತ್, ಸಲ್ಮಾನ್, ವಾಸು ಪಾಂಡು, ಅಬ್ದುಲ್ ಗಫೂರ್, ಮಾರುತಿ, ರಾಜೇಶ್ ಅಮರಾವತಿ, ಶಶಿನಾಯ್ಕ್, ರಿಜ್ವಾನ್, ಪರಶುರಾಮ್, ಪವನ್ ಕುಮಾರ್, ಫೈಯಾಜ್ ಆಹ್ಮದ್, ಖಲೀಲ್ ಸಾಬ್, ಜಿಯಾವುಲ್ಲಾ, ಇಮ್ರಾನ್ ಕೆ, ಇಂತಿಯಾಜ್, ಅಶ್ಪಾಕ್, ಮೆಹಬೂಬ್ ಸಾಬ್, ಫಕೃದ್ದೀನ್ ಇತರರು ಹಾಜರಿದ್ದರು.

## ಪರ್ಲ್ ಪಬ್ಲಿಕ್ ಶಾಲೆ ವಿದ್ಯಾರ್ಥಿನಿ ಅನ್ವಿತ ಅಕಲ್‌ಗೋಳ್ ರಾಜ್ಯ ಮಟ್ಟಕ್ಕೆ ಆಯ್ಕೆ



ಹರಪನಹಳ್ಳಿ, ಜ.19- ಪಟ್ಟಣದ ಹೊರ ವಲಯದಲ್ಲಿರುವ ಪ್ರಕೃತಿ ವಿದ್ಯಾಸಂಸ್ಥೆಯ ಪರ್ಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಅನ್ವಿತ ಅಕಲ್‌ಗೋಳ್ ಅವರು, ವಿವೇಕ ವಿದ್ಯಾರ್ಥಿ ಎಂಬ ವ್ಯಕ್ತಿತ್ವ ನಿರ್ಮಾಣಕಾರಿ ಲಿಖಿತ ಪರೀಕ್ಷೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ತುಮಕೂರಿನ ಕರ್ನಾಟಕ ರಾಮಕೃಷ್ಣ ವಿವೇಕಾನಂದ ಭಾವ ಪ್ರಚಾರ ಪರಿಷತ್ ಎಂಬ ಸಂಸ್ಥೆ ಅಡಿಯಲ್ಲಿ ನವೆಂಬರ್ ತಿಂಗಳಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ವಿವೇಕ ವಿದ್ಯಾರ್ಥಿ ಎಂಬ ವ್ಯಕ್ತಿತ್ವ ನಿರ್ಮಾಣ ಲಿಖಿತ ಪರೀಕ್ಷೆ ಏರ್ಪಡಿಸಲಾಗಿತ್ತು. ಈ ಪರೀಕ್ಷೆಯಲ್ಲಿ ಪರ್ಲ್ ಪಬ್ಲಿಕ್ ಶಾಲೆಯ 8ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅನ್ವಿತ ಅಕಲ್‌ಗೋಳ್ ವಿವೇಕ ವಿದ್ಯಾರ್ಥಿ ಲಿಖಿತ ಪರೀಕ್ಷೆ ಯನ್ನು ತೆಗೆದುಕೊಂಡು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಜ. 20ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆ ಮತ್ತು ವಿವೇಕ ವಿದ್ಯಾರ್ಥಿ ಪರೀಕ್ಷೆಯ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿದ್ಯಾರ್ಥಿನಿ ಅನ್ವಿತ ಅಕಲ್‌ಗೋಳ್‌ಗೆ ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದಿಂದ ಆಹ್ವಾನ ಕಳುಹಿಸಲಾಗಿದೆ.

## ಮಂದಿರ ಪ್ರಾಣ ಪ್ರತಿಷ್ಠಾಪನೆಗೆ ರಜೆ ಸಂವಿಧಾನ ಬಾಹಿರ: ಸಿಪಿಐ (ಎಂ)

ನವದೆಹಲಿ, ಜ. 19 – ರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆ ದಿನದಂದು ಕೇಂದ್ರ ಸರ್ಕಾರದ ಕಚೇರಿಗಳು ಹಾಗೂ ಕೇಂದ್ರೀಯ ಸಂಸ್ಥೆಗಳಿಗೆ ಅರ್ಧ ದಿನಗಳ ರಜೆ ಘೋಷಿಸಿರುವುದು ಸಂವಿಧಾನ ವಿರೋಧಿ ಹಾಗೂ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳಿಗೆ ವಿರುದ್ಧವಾಗಿದೆ ಎಂದು ಸಿಪಿಐ (ಎಂ) ಆರೋಪಿಸಿದೆ.

ಜನವರಿ 22ರಂದು ಮಧ್ಯಾಹ್ನ 2.30ರವರೆಗೆ ಕೇಂದ್ರ ನೌಕರರಿಗೆ ರಜೆ ಘೋಷಿಸಲಾಗಿದೆ. ಬಿಜೆಪಿ ಆಡಳಿತದ ಕೆಲ ರಾಜ್ಯಗಳೂ ಇದೇ ರೀತಿಯ ಕ್ರಮ ತೆಗೆದುಕೊಂಡಿವೆ. ಸರ್ಕಾರವನ್ನು ಧಾರ್ಮಿಕ ಕಾರ್ಯಕ್ರಮಗಳಲ್ಲಿ ತೊಡಗಿಸಲಾಗುತ್ತಿದೆ ಎಂದು ಸಿಪಿಐ (ಎಂ) ಆಕ್ಷೇಪಿಸಿದೆ.

ಉದ್ಯೋಗಿಗಳಿಗೆ ತಮ್ಮ ಧಾರ್ಮಿಕ ನಂಬಿಕೆ ಹಾಗೂ ವರ್ತನೆಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ವೈಯಕ್ತಿಕ ಆಯ್ಕೆ ಇದೆ. ಸರ್ಕಾರ ಈ ರೀತಿಯ ಸುತ್ತೋಲೆ ಮೂಲಕ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಪಕ್ಷ ಆರೋಪಿಸಿದೆ.

# ಸರ್ಕಾರಿ ಶಾಲೆಗಳ ಉಳಿವಿಗೆ ಖಾಸಗಿ ಸಂಸ್ಥೆಗಳು ಅವಶ್ಯಕ



### ಹರಿಹರದ ಬಿಇಓ ಹನುಮಂತಪ್ಪ

ಮಲೇಬೆನ್ನೂರು, ಜ. 19 - ಖಾಸಗಿ ಸಂಸ್ಥೆಗಳು ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಧಾವಿಸಿದರೆ ಸರ್ಕಾರಿ ಶಾಲೆಯಲ್ಲಿ ಮಕ್ಕಳ ದಾಖಲಾತಿ ಹೆಚ್ಚಾಗುವುದರ ಜೊತೆಗೆ ಸರ್ಕಾರಿ ಶಾಲೆಗಳ ಉಳಿವಿಗೆ ಕಾರಣವಾಗುತ್ತದೆ ಎಂದು ಬಿಇಓ ಹನುಮಂತಪ್ಪ ಹೇಳಿದರು.

ಯಲವಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಯುರೋಪಿನ್ಸ್ ಕಂಪನಿ ಆಯೋಜಿಸಿದ್ದ ವಿವಿಧ ಕಲಿಕಾ ಸಾಮಗ್ರಿಗಳ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ದಾವಣಗೆರೆ ರೋಟರಿ ಕ್ಲಬ್‌ನ ಸಾರ್ವಜನಿಕ ಸಂಪರ್ಕ ನಿರ್ದೇಶಕ ಆರ್.ಟಿ. ಮೃತ್ಯುಂಜಯ ಮಾತನಾಡಿ ಯುರೋಪಿನ್ಸ್ ಕಂಪನಿ ಅವರು 7 ಲಕ್ಷ ರೂ. ವೆಚ್ಚದಲ್ಲಿ ಯಲವಟ್ಟಿ ಮತ್ತು ಧೂಳೆ ಹೊಳೆ ಗ್ರಾಮದ ಸರ್ಕಾರಿ ಶಾಲೆಯಲ್ಲಿನ 312 ಮಕ್ಕಳಿಗೆ ಸ್ಕೂಲ್ ಬ್ಯಾಗ್, ನೀರಿನ ಬಾಟಲ್‌ಗಳನ್ನು ವಿತರಿಸಿದ್ದು ಜೊತೆಗೆ ಕಲಿಕೆಗೆ ಪೂರಕವಾದ ಹಸಿರು ಬೋರ್ಡ್‌ಗಳನ್ನು ನೀಡಿರುವುದು ತುಂಬಾ ಸಂತೋಷದ ವಿಷಯ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಶರಣ್ ಕುಮಾರ್ ಹೆಗಡೆ ಮಾತನಾಡಿ, ಯುರೋಪಿನ್ಸ್ ಕಂಪನಿಯ ಸಿಎಸ್‌ಆರ್ ಮುಖ್ಯಸ್ಥರಾದ ರೇಖಾ ಮಂಡಲ್ ಹಾಗೂ ಶಿವಯೋಗಿ ಹಟ್ಟಿ ರೋಟರಿ ಸಂಸ್ಥೆಯ ಮೂಲಕ ಮಕ್ಕಳಿಗೆ ಸಹಾಯ ಹಸ್ತ ಚಾಚಿರುವುದು ಬಡ ಮಕ್ಕಳ ಮೇಲೆ ಇರುವ ಪ್ರೀತಿ, ಕಾಳಜಿ ತೋರುತ್ತದೆ. ಯಲವಟ್ಟಿ ಮತ್ತು ಧೂಳೆಹೊಳೆ ಶಾಲೆಗಳ ಮನವಿಗೆ ಸ್ಪಂದಿಸಿದ ಕಂಪನಿಯ ಮುಖ್ಯಸ್ಥರಿಗೆ ಹೆಗಡೆ ಧನ್ಯವಾದ ತಿಳಿಸಿದರು.

ದಾವಣಗೆರೆ ಕ್ಲಬ್‌ನ ಅಧ್ಯಕ್ಷರಾದ ಕುಸುಮಾ ವಿಜಯಾನಂದ್, ಕಾರ್ಯದರ್ಶಿ ಸುನಿತಾ ಮೃತ್ಯುಂಜಯ, ಅಂದನೂರು ಆನಂದ ಕುಮಾರ್, ಜಿ.ಎಂ. ಲೋಹಿತಾಶ್ವ, ಕ್ಲಸ್ಟರ್‌ನ ಸಿ.ಆರ್.ಪಿ ಕರಡಿ ಪ್ರಕಾಶ್, ತಾ. ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಕೆ.ಬೀರಪ್ಪ, ಶಿಕ್ಷಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರಾಮನಗೌಡ ಪ್ಯಾಟಿ, ಶಿಕ್ಷಕರ ಸಂಘದ ಖಜಾಂಚಿ ವಿನೋದಮ್ಮ, ಸದಸ್ಯ ಮಂಜಪ್ಪ ಬಿದರಿ, ಶಾಲೆಯ ಮುಖ್ಯ ಶಿಕ್ಷಕ ರವೀಂದ್ರ ಚಾರಿ, ಶಿಕ್ಷಕರುಗಳಾದ ರಾಘವೇಂದ್ರ, ಪರಶುರಾಮ, ವಿಜಯ್ ಕುಮಾರ್, ನಾಗ ಮಂಜುಳಾ ಜೋಶಿ, ಅನುರಾಧಗೌಡ ಹಾಗೂ ಇತರರು ಈ ವೇಳೆ ಹಾಜರಿದ್ದರು.


## ನಗರದಲ್ಲಿ ಇಂದು ಶಾಲಾ ವಾರ್ಷಿಕೋತ್ಸವ

ಚನ್ನಗಿರಿ ವಿರೂಪಾಕ್ಷಪ್ಪ ವನಜಾಕ್ಷಮ್ಮ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಚನ್ನಗಿರಿ ರಾಧಮ್ಮ ರಂಗಪ್ಪ ಇಂಗ್ಲಿಷ್ ಮೀಡಿಯಂ ನರ್ಸರಿ ಶಾಲೆಯ ವಾರ್ಷಿಕೋತ್ಸವ ಸಮಾರಂಭವನ್ನು ಇಂದು ಬೆಳಿಗ್ಗೆ 10 ಗಂಟೆಗೆ ಗಡಿಯಾರ ಕಂಬದ ಹತ್ತಿರವಿರುವ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಧ್ಯಕ್ಷತೆಯನ್ನು ಆರ್.ಎಸ್. ನಾರಾಯಣಸ್ವಾಮಿ ವಹಿಸುವರು. ಮುಖ್ಯ ಅತಿಥಿಗಳಾಗಿ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಶೇರ್ ಅಲಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ ಆಗಮಿಸುವರು.

## ಕೆ.ಬೇವಿನಹಳ್ಳಿ ಗ್ರಾ.ಪಂ ಅಧ್ಯಕ್ಷರಾಗಿ ರೇಖಾ

ಮಲೇಬೆನ್ನೂರು, ಜ.19- ಕೆ.ಬೇವಿನಹಳ್ಳಿ ಗ್ರಾ.ಪಂ ಅಧ್ಯಕ್ಷರಾಗಿ ಶ್ರೀಮತಿ ರೇಖಾ ಕೋಂ ಬಿ.ಎಂ.ಹಾಲೇಶ್ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕೆ.ಜಯ್ಯಪ್ಪ ಅವರ ರಾಜೀನಾಮೆ ಯಿಂದಾಗಿ ಅಧ್ಯಕ್ಷ ತೆರವಾಗಿತ್ತು. ಗ್ರಾ.ಪಂ. ಉಪಾಧ್ಯಕ್ಷರು, ಸರ್ವ ಸದಸ್ಯರು ಸೇರಿದಂತೆ ಈ ವೇಳೆ ಹಾಜರಿದ್ದರು.



## ನಗರದಲ್ಲಿ ಇಂದು

ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಬಾಪೂಜಿ ಹೈಯರ್ ಪ್ರೈಮರಿ ಸಿಬಿಎಸ್‌ಇ ಶಾಲಾ ವಾರ್ಷಿಕೋತ್ಸವ 'ಅವಿಸ್ಮೃತಿ' ಇಂದು ಮಧ್ಯಾಹ್ನ 4.30ಕ್ಕೆ ಶಾಲಾ ಆವರಣದಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಶ್ರೀಮತಿ ಕಿರುವಾಡಿ ಗಿರಿಜಮ್ಮ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ದೀಪ್ತಿ ಪೃಥ್ವಿ, ಡಾ. ಎಂ.ಜಿ. ಈಶ್ವರಪ್ಪ, ಪ್ರೊ. ವೈ. ವೃಷಭೇಂದ್ರಪ್ಪ ಆಗಮಿಸುವರು. ಶಾಲಾ ಪ್ರಾಂಶುಪಾಲ ಸತೀಶ್ ಹೆಚ್.ಎಸ್. ಉಪಸ್ಥಿತರಿರುವರು.

## ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಜ.19- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ನೀಡುವ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಅಲ್ಲಿಸುವ ಅವಧಿಯನ್ನು ಇದೇ ದಿನಾಂಕ 20 ರವರೆಗೆ ವಿಸ್ತರಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 40x65,30x50 (ಅಕ್ಕ-ಪಕ್ಕ), ಪಶ್ಚಿಮ 30x70 (60ಅಡಿ ರಸ್ತೆ) ಶಿವ ಪಾರ್ವತಿ ಪೂರ್ವ 40x55,40x60(ಅಕ್ಕ-ಪಕ್ಕ) 30x70 ಪಶ್ಚಿಮ 30x40 (ಅಕ್ಕ-ಪಕ್ಕ) 30x55
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ಬೇಸಿಕ್ ಮತ್ತು ಟ್ಯಾಲಿ ಟೀಚ್ ಮಾಡಲು ಅನುಭವವುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಎಜುಕೇಶನ್
ಎಂ.ಸಿ.ಸಿ. 'ಬಿ' ಬ್ಲಾಕ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ.
ಮೊ. 90364 27272

**ಕರ್ನಾಟಕ ಗೃಹ ಮಂಡಳಿ**
20x30 ಸೈಟ್, ಪೂರ್ವ (16 ಲಕ್ಷ) ಮಾರಾಟಕ್ಕೆ ಇದೆ.
ಕಿರಣ್ ಬೂಸ್ನೂರ್
97315 63409

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**Property Doctor / ಪ್ರಾಪರ್ಟಿ ಡಾಕ್ಟರ್**
(All Works under One Roof)
EC, E-Swathu, Building Licence, Khatha Change, Property Registration, Loan-SBI, Canara + 40 Banks
96325 54524

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ, ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, ಪೂಜಾ ರೂಂ, 24ಗಂಟೆ ನೀರಿನ ವ್ಯವಸ್ಥೆಯಿರುವ ಡಬ್ಬಲ್ & ಸಿಂಗಲ್ ಬೆಡ್ ರೂಂ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ.
ಮೊ. : 99004 66607

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸುಗಳು ಬೇಕಾಗಿದ್ದಾರೆ. ನುರಿತ ಅನುಭವವುಳ್ಳ A.N.M ಮತ್ತು G.N.M. ಆದವರು ಈ ಕೆಳಗಿನ ಮೊಬೈಲ್ ನಂಬರ್ ಗೆ ತಮ್ಮ ಬಯೋಡೇಟಾದೊಂದಿಗೆ ಸಂಪರ್ಕಿಸಿ.
98450 35710

**ಮನೆ ಬಾಡಿಗೆಗೆ ಇದೆ**
ಬೋರ್ ಮತ್ತು ನಲ್ಲಿ ನೀರಿನ ಸೌಕರ್ಯವಿರುವ 2 ಬೆಡ್ ರೂಂವುಳ್ಳ ಸುಸಜ್ಜಿತವಾದ ಮೊದಲನೇ ಮಹಡಿಯಲ್ಲಿರುವ ಮನೆ ಬಾಡಿಗೆಗೆ ಇದೆ. "ಈರಮ್ಮ ನಿಲಯ" MCC 'A' ಬ್ಲಾಕ್, 4ನೇ ಮುಖ್ಯರಸ್ತೆ, ಹಳೇ ಗುರು ಸ್ಕ್ಯಾನಿಂಗ್ ಪಕ್ಕ, ದಾವಣಗೆರೆ. ವಿಚಾರಿಸಿ
98868 25228
98866 53398

**ಬೇಕಾಗಿದ್ದಾರೆ**
ದಾವಣಗೆರೆ ಹೆಸರಾಂತ ಜ್ಯೂಯಲರಿ ಶೋರೂಂನಲ್ಲಿ ಕೆಲಸ ಮಾಡಲು ಅನುಭವವುಳ್ಳ ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:
ರವಿ ಜ್ಯೂಯಲರ್ಸ್, ಮಂಡಿಪೇಟೆ, ದಾವಣಗೆರೆ
ಮೊ: 99649 32113

**2BHK LEASE**
15 Lakh lease for 3 years, All higher quality interiers, Inside brokers are not available. Only buyers can call directly.
90364 66669

**ಮನೆಗಳು ಬಾಡಿಗೆಗೆ ಇವೆ**
ಎಂ.ಸಿ.ಸಿ. "ಬಿ" ಬ್ಲಾಕ್, 5ನೇ ಮೇನ್, 5ನೇ ಕ್ರಾಸ್ ಮತ್ತು 10ನೇ ಮೇನ್, 4ನೇ ಕ್ರಾಸ್ ಹತ್ತಿರ 3 ಬೆಡ್ ರೂಂ, 1ನೇ ಮಹಡಿ, ಮನೆ ಮತ್ತು 2 ಬೆಡ್ ರೂಂ ನೆಲ ಮಹಡಿ ಮನೆ ಬಾಡಿಗೆಗೆ ಇದೆ.
99805 51500

**ಬೇಕಾಗಿದ್ದಾರೆ**
* ಸೇಲ್ಸ್ ಎಕ್ಸಿಕ್ಯೂಟಿವ್
* ಆಫೀಸ್ ಬಾಯ್
ಸಂಪರ್ಕಿಸಿ :
ಮನ್ವಿತ ಎಂಟರ್‌ಪ್ರೈಸಸ್
63620 23451, 97434 37003

**ಮನೆ ಬಾಡಿಗೆಗಿದೆ**
30x40 ಅಡಿ ಅಳತೆಯ ಎರಡು ಬೆಡ್ ರೂಂ, ಬೋರ್ ವೆಲ್ ಸೌಲಭ್ಯವಿರುವ ಸುಸಜ್ಜಿತ ನೆಲಮಹಡಿ ಮನೆ, 'ಅಶ್ವಥ್ ಹಲಗೇರಿ ಅಕ್ಷಯ ನಿಲಯ', 7ನೇ ಕ್ರಾಸ್, 18ನೇ ಮೇನ್, ಕುವೆಂಪುನಗರ, ಬಾಪೂಜಿ ಶಾಲೆ ಹತ್ತಿರ, ಎಂ.ಸಿ.ಸಿ.'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಬಾಡಿಗೆಗಿದೆ. ಸಸ್ಯಹಾರಿಗಳು ಮಾತ್ರ ಸಂಪರ್ಕಿಸಿ:
ರಾಘವೇಂದ್ರ, ಹಲಗೇರಿ
97403 84315

**LECTURERS WANTED**
☛ Micro - Biology
☛ Bio - Chemistry
☛ Physics ☛ Chemistry
☛ Biology ☛ English
☛ Lab Technician - 1
☛ OT Technician - 1
☛ Eye Technician - 1
99456 71179
63643 63599

**APARTMENT SALE FOR 4 CRORES**
Brokers are not available. Only direct buyers can call. 2BHK rent receiving 5 house with lift facility 24x7 water, Fent house 5 bed rooms available. Top lake view 6 car parking space in ground 50x32 feet.
90364 66669

**ಮನೆ ಲೀಸ್‌ಗೆ ಇದೆ**
'ಬಿ' ಬ್ಲಾಕ್, 4ನೇ ಮೇನ್ ರೋಡ್, ಎಸ್.ಎಸ್. ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಡಬ್ಬಲ್ ಬೆಡ್ ರೂಮ್ ಇರುವ ಹಾಗೂ ಬಾಲ್ಕನಿ ಅಟ್ಯಾಚ್ ಬಾತ್ ರೂಮ್ ಮನೆ ಲೀಸ್‌ಗೆ ಇದೆ. ವಿಚಾರಿಸಿ :
97425 37448

**ತಕ್ಷಣ ಸಂಪರ್ಕಿಸಿರಿ**
ನುರಿತ ಪುರುಷ ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್, ಬೇಕಾಗಿದ್ದಾರೆ. ESI & PF ಮತ್ತು ಊಟ, ವಸತಿ ಸೌಲಭ್ಯ ಇರುತ್ತದೆ
72044 00262
88844 99983

**ಮಾರಾಟಕ್ಕಿದೆ**
65 HP ವಿದ್ಯುತ್‌ಉಳ್ಳ ಕೈಗಾರಿಕೆಗೆ ಅನುಕೂಲವಾಗಿರುವ RCC ಬಿಲ್ಡಿಂಗ್ ಇರುವ ಇಂಡಸ್ಟ್ರಿ ಮಾರಾಟಕ್ಕಿದೆ. ಬ್ರೋಕರ್‌ಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ :
90364 66669

**ಡ್ರೈವರ್ ಬೇಕಾಗಿದ್ದಾರೆ**
ಆಪೇ ಗಾಡಿ ಓಡಿಸಲು ಲೈಸನ್ಸ್ ಉಳ್ಳ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ: 72596 35931

**ಸ್ಮಾರ್ಟ್ ಸಿಟಿ ಕ್ಯಾಬ್ಸ್ ದಾವಣಗೆರೆ**
ಕನಿಷ್ಠ 4ಕಿ.ಮೀ. ರೂ. 99/- ಅದಕ್ಕಿಂತ ಹೆಚ್ಚು 1ಕಿ.ಮೀ. ರೂ. 25/- ಕಾಯಿಸಿದ ವೆಚ್ಚ 1 ತಾಸಿಗೆ ರೂ. 100/- 24 ಗಂಟೆ ಸರ್ವಿಸ್ ನೀಡಲಾಗುತ್ತದೆ.
08192 255555
94811 79933, 99868 18205

**ಜಮೀನು ಮಾರಾಟಕ್ಕಿದೆ**
2 ಎಕರೆ ಖುಷ್ಕಿ ಜಮೀನು ಹಾಲುವರ್ತಿಯಲ್ಲಿ ಮಾರಾಟಕ್ಕಿದೆ.
ಸರ್ವೆ ನಂ.95/6
ಸಂಪರ್ಕಿಸಿ:
98445 27762

**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್, ತುಮಕೂರು.**
ಫೋ: 84960 44942, 82774 09101
27-1-2024 ಕಾಶಿ , ವೈದ್ಯನಾಥ (ಜಾರ್ಖಂಡ್) ವಿಮಾನ ಪ್ರವಾಸ: ಕಾಶಿ, ಅಯೋಧ್ಯೆ, ಪ್ರಯಾಗ್ ರಾಜ್, ಗಯಾ, ಬುದ್ದಗಯಾ, ವೈದ್ಯನಾಥ. 8 ದಿನಗಳು
11-2-2024 ನಾಲ್ಕು ಜ್ಯೋತಿರ್ಲಿಂಗ ಗುಜರಾತ್, ಉಜ್ಜಯಿನಿ ವಿಮಾನ ಪ್ರವಾಸ: ಪಟೇಲ್ ಪ್ರತಿಮೆ, ನಿಷ್ಕಳಂಕ ಮಹಾದೇವ, ಪೋರ್ ಬಂದರ್, ದ್ವಾರಕಾ, ಬೇಟ್ ದ್ವಾರಕಾ, ಅಹಮದಾಬಾದ್, ಸಾಬರಮತಿ ಆಶ್ರಮ, ಅಕ್ಷರಧಾಮ , ಸೋಮನಾಥ ಜ್ಯೋತಿರ್ಲಿಂಗ, ನಾಗೇಶ್ವರ ಜ್ಯೋತಿರ್ಲಿಂಗ, ಮಹಾಕಾಳೇಶ್ವರ ಜ್ಯೋತಿರ್ಲಿಂಗ, ಓಂಕಾರೇಶ್ವರ ಜ್ಯೋತಿರ್ಲಿಂಗ, 10 ದಿನಗಳು
29-2-2024 ರಾಜಸ್ಥಾನ ವಿಮಾನ ಪ್ರವಾಸ: 10 ದಿನಗಳು
23-3-2024 ಮಹಾಬಲೇಶ್ವರ ಗಿರಿಧಾಮ ಸ್ಪೆಷಲ್ ಮಹಾರಾಷ್ಟ್ರ ವಿಮಾನ ಪ್ರವಾಸ: ಮೂರು ಜ್ಯೋತಿರ್ಲಿಂಗ ಭೀಮಾಶಂಕರ, ಘೃಷ್ಣೇಶ್ವರ, ತ್ರ್ಯಂಬಕೇಶ್ವರ, ಮಹಾಬಲೇಶ್ವರ ಗಿರಿಧಾಮ, ಶಿರಡಿ, ಶನಿಸಿಂಗನಾಪುರ, ನಾಸಿಕ್, ಎಲ್ಲೋರ, ಪಂಡರಾಪುರ, ಸೋಲಾಪುರ, ಕೊಲ್ಲಾಪುರ 7 ದಿನಗಳು
ಎಲ್ಲಾ ಪ್ರವಾಸಕ್ಕೂ ತಿಂಡಿ-ಊಟ, ಎಸಿ ರೂಂ, ಪ್ರಯಾಣ ವೆಚ್ಚ ಸೇರಿದೆ

**WANTED**
Male/Female
B.Com graduate/dropout Receptionist for clinic Contact:
97417 42285

**ರಕ್ತ ದಾನ ಶ್ರೇಷ್ಠ ದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸೈಟ್ ಮಾರಾಟಕ್ಕಿದೆ**
KHB ಲೇಔಟ್‌ನಲ್ಲಿ 50x80 ಅಳತೆಯ ಪಶ್ಚಿಮ ದಿಕ್ಕಿನಲ್ಲಿರುವ ಸೈಟ್ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಆಸಕ್ತಿಯುಳ್ಳವರು ನೇರವಾಗಿ ಸೈಟ್ ಓನರ್‌ಗೆ ಸಂಪರ್ಕಿಸಿ:
63621 81509

**ಸೈಟು & ಮನೆ ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ ಮನೆ (30x50) ಪಶ್ಚಿಮ
2) ಡಾಲರ್ಸ್ ಕಾಲೋನಿ ಸೈಟ್ (40x51) ಪಶ್ಚಿಮ
3) ಹಳೇ ಕುಂದವಾಡ ಸೈಟ್ (30x50) ಪಶ್ಚಿಮ
ಸಂಪರ್ಕಿಸಿ:
97404 47907, 91481 25125

**ತಕ್ಷಣ ಬೇಕಾಗಿದ್ದಾರೆ**
ಸಹಾಯಕರು, ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. ಪಾರ್ಟ್‌ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
79751 07268

**WANTED**
OM DENTAL CARE
Ram & Co Circle, Davangere.
1) BDS Dentist
2) Staff
(Full time & Part Time)
90669 93738

**HOUSE FOR RENT**
1st floor- 2 BHK & Having solar water & borewel water facility available for rent, # 1982/ 2, 6th Cross, siddaveerappa layout, DVG.
94806 93506, 82777 97633

**WANTED**
Banking Sector Job Openings (Female)
Qualification : Any Degree.
90715 55081
Interview Time - 11AM

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
BIET College Road, Siddaveerappa Badavane, 13th Cross, Davanagere.
bhoomikamatrimony.com
77603 16576
90080 55813

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿ ಕೆಲಸಕ್ಕೆ ಅನುಭವ ಉಳ್ಳವರು ಬೇಕಾಗಿದ್ದಾರೆ.
ಶ್ರೀ ಗುರು ಕೊಟ್ಟೂರೇಶ್ವರ ಪ್ರಾವಿಜನ್ ಸ್ಟೋರ್
ಐ.ಟಿ.ಐ ಕಾಲೇಜು, # 617/6, 60 ಅಡಿ ರೋಡ್ ನಿಟ್ಟುವಳ್ಳಿ, ದಾವಣಗೆರೆ-577005.
95919 21004,73381 00402

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ, ದಂಪತಿ ಬೇಕಾಗಿದ್ದಾರೆ. ಸಂಬಳ 20,000/- ಊಟ+ವಸತಿ ಉಚಿತ.
97400 98047

**WANTED**
Banking Sector Field Officer (Male Only)
Qualification : Any Degree.
90715 55081
Interview Time - 11AM

**ಓಂ ಶ್ರೀ ಆದಿಶಕ್ತಿ ದುರ್ಗಾದೇವಿ ಮಾತಾ ಜ್ಯೋತಿಷ್ಯ ಕೇಂದ್ರ**
ನಿಮ್ಮ ಸಮಸ್ಯೆಗಳಾದ ಪ್ರೇಮ ವಿಚಾರ, ಕುಟುಂಬ ಕಲಹ, ವಿದೇಶಿ ಪ್ರಯಾಣ, ಅತ್ತೆ-ಸೊಸೆ ಜಗಳ, ಇಷ್ಟ ಪಟ್ಟದ್ದು ನಿಮ್ಮಂತೆ ಆಗಲು, ಆರೋಗ್ಯ ಸಮಸ್ಯೆ, ಹಣಕಾಸಿನ ತೊಂದರೆ, ಉದ್ಯೋಗ ವಿಚಾರ, ಮನೆಯಲ್ಲಿ ಅಶಾಂತಿ, ಇನ್ನೂ ಮುಂತಾದ ಸಮಸ್ಯೆಗಳು, ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿದ್ದರೂ 100 ಕ್ಕೆ 101 ರಷ್ಟು ಪರಿಹಾರ ಮಾಡಿಕೊಡುತ್ತಾರೆ.
ದೈವಜ್ಞ ಪಂಡಿತ್, ದುರ್ಗಾ ಪ್ರಸಾದ್ ಭಟ್ ಸಂಪರ್ಕಿಸಿ :
96205 25246
ನಿಮ್ಮ ಸಮಸ್ಯೆ ಫೋನಿನ ಮೂಲಕ ಪರಿಹಾರ ಮಾಡಿಕೊಡುತ್ತಾರೆ.

**ಬೇಕಾಗಿದ್ದಾರೆ**
* Accountant experienced Tally known and to manage Industrial office.
* Driver cum assistant
ಕೈಗಾರಿಕಾ ಪ್ರದೇಶ, ಲೋಕಿಕೆರೆ ರಸ್ತೆ, ದಾವಣಗೆರೆ.
ವಾಟ್ಸಾಪ್ ರೆಸ್ಯೂಮ್ & ಕರೆ ಮಾಡಿ:
99863 66358

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**2 BHK FLAT FOR SALE**
1250 Sq. ft., 2 Balconies. 2nd Floor, Lift and Power-back Present.
Location : Shankuntala Park View, MCC 'B' Block, 7th Main, Davanagere.
CONTACT- WhatsApp only to
+91- 9742521922

**'ಮಚ್ಚೆ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಜಿಲ್ಲೆಯಲ್ಲಿ ಸರ್ಕಾರಿ ರಜೆ ನೀಡಲು ಮನವಿ



ದಾವಣಗೆರೆ, ಜ.19- ಇದೇ ದಿನಾಂಕ 22ರಂದು ಅಯೋಧ್ಯೆಯಲ್ಲಿ ಶ್ರೀರಾಮ ದೇವರ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದ ಪ್ರಯುಕ್ತ ಜಿಲ್ಲೆಯಲ್ಲಿ ಸರ್ಕಾರಿ ರಜೆ ಘೋಷಣೆ ಮಾಡಬೇಕೆಂದು ಒತ್ತಾಯಿಸಿ, ಜಿಲ್ಲಾಧಿಕಾರಿಗಳಿಗೆ ಮಾತೃ ದೇವೋ ಟ್ರಸ್ಟ್ ಮತ್ತು ಪ್ರೇರಣಾ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಮನವಿ ಸಲ್ಲಿಸಲಾಯಿತು. ಅಯೋಧ್ಯೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಲಕ್ಷಾಂತರ ಮಂದಿ ಭಾಗಿಯಾಗಲಿದ್ದಾರೆ. ಈ ಅಪರೂಪದ ಕ್ಷಣಗಳಿಗೆ ನೇರವಾಗಿ ಸಾಕ್ಷಿಯಾಗಲು ಎಲ್ಲರಿಂದಲೂ ಸಾಧ್ಯವಿಲ್ಲ. ಹೀಗಾಗಿ ಅಂದಿನ ದೃಶ್ಯಗಳನ್ನು ಕಣ್ತುಂಬಿಕೊಳ್ಳಲು, ಹಾಗೂ ಜಿಲ್ಲೆಯಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಈ ಕಾರಣ ಜಿಲ್ಲೆಯಾದ್ಯಂತ ಶಾಲಾ-ಕಾಲೇಜು ಹಾಗೂ ಸರ್ಕಾರಿ ಕಚೇರಿಗಳಿಗೆ ರಜೆ ನೀಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಾಡದ ಆನಂದರಾಜ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಪೋತಲು ಶ್ರೀನಿವಾಸ್, ಶ್ರೀಮತಿ ಚೇತನಾ, ಶ್ರೀಮತಿ ಭಾಗ್ಯ ಪಿಸಾಳೆ, ಚಂದ್ರಕಲಾ ಎಂ, ನವೀನ್ ಗುಬ್ಬಿ, ಗಂಗಾಧರ ಜಿ.ವಿ, ಶಿವನಗೌಡ ಪಾಟೀಲ್, ಟಿಂಕರ್ ಮಂಜಣ್ಣ ಇನ್ನೂ ಮುಂತಾದ ಹಿಂದೂ ಪರ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

# ವಿನೋಬನಗರದಲ್ಲಿ ನಾಳೆ ಲಿಂ. ಸಿದ್ಧಗಂಗಾ ಶ್ರೀಗಳ 5ನೇ ಸ್ಮರಣೋತ್ಸವ



ದಾವಣಗೆರೆ, ಜ.19- ಇಲ್ಲಿನ ವಿನೋಬ ನಗರದ ಸಿದ್ದಗಂಗಾ ಗೆಳೆಯರ ಬಳಗದ ವತಿಯಿಂದ ನಾಡಿದ್ದು ದಿನಾಂಕ 21ರ ಭಾನುವಾರ 3ನೇ ಮೇನ್, 1ನೇ ಕ್ರಾಸ್ ಬಳಿ, ಶ್ರೀ ಬಸವೇಶ್ವರ ವೃತ್ತದ ಶ್ರೀ ಸಿದ್ದಗಂಗಾ ಉದ್ಯಾನವನದಲ್ಲಿ ಲಿಂಗೈಕ್ಯ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರ 5ನೇ ವರ್ಷದ ಸ್ಮರಣೋತ್ಸವ ಮತ್ತು ದಾಸೋಹ ದಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಭಾನುವಾರ ಬೆಳಿಗ್ಗೆ 8.30 ಗಂಟೆಗೆ ಸಿದ್ದಗಂಗಾ ಶ್ರೀಗಳು ಮತ್ತು ವಿಶ್ವಗುರು ಬಸವಣ್ಣನವರ ಭಾವಚಿತ್ರ ಮತ್ತು ವಚನ ಗ್ರಂಥದ ಪಲ್ಲಕ್ಕಿ ಉತ್ಸವ ಜರುಗಲಿದೆ. 11 ಗಂಟೆಗೆ ಶ್ರೀಗಳ ಸ್ಮರಣೆ ಮತ್ತು ಅನುಭಾವ ಚಿಂತನ ಕಾರ್ಯಕ್ರಮವು ಕೃಷಿ ಕಾಯಕ ಯೋಗಿ ನಂದೀಪುರ, ಹಗರಿಬೊಮ್ಮನಹಳ್ಳಿಯ ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ನೆರವೇರಲಿದೆ. ಮುಖ್ಯ ಅತಿಥಿಗಳಾಗಿ ಬಸವಶ್ರೀ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಿಕ್ಕ ಹೆಜ್ಜಾಜೆ ಮಹಾದೇವ, ಜ್ಯೂನಿಯರ್ ರಾಜಕುಮಾರ್ ಆರ್. ನಾರಾಯಣಪ್ಪ ಆಗಮಿಸುವರು. ಮಧ್ಯಾಹ್ನ 1.30 ಗಂಟೆಗೆ ದಾಸೋಹ ಹಾಗೂ ವಚನಾಮೃತ ಗಾನ ಕಾರ್ಯಕ್ರಮವಿರುತ್ತದೆ ಎಂದು ಸಿದ್ದಗಂಗಾ ಗೆಳೆಯರ ಬಳಗದ ಉಪಾಧ್ಯಕ್ಷರಾದ ಶ್ರೀಮತಿ ಸುಜಾತ ವಾಲಿ ತಿಳಿಸಿದ್ದಾರೆ.

**ರಕ್ತದಾನ ಶಿಬಿರ** : ನಾಡಿದ್ದು ದಿನಾಂಕ 21 ರಂದು ಬೆಳಿಗ್ಗೆ 10ಕ್ಕೆ ರಕ್ತ ದಾನ ಶಿಬಿರವನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಸಹಯೋಗದಲ್ಲಿ ಏರ್ಪಡಿಸಲಾಗಿದೆ.

# ವಿದ್ಯಾರ್ಥಿಗಳ ಬ್ರಹ್ಮಚರ್ಯ ಪಾಲನೆಯಿಂದ ಸಾಧನೆ

## ಸುಖದೆಡೆ ವಾಲಿದರೆ ಜೀವನ ನಾಶ: ಶ್ರೀ ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್



ದಾವಣಗೆರೆ, ಜ. 19 - ಬ್ರಹ್ಮಚರ್ಯ ವಯೋಮಾನದಲ್ಲಿರುವ ವಿದ್ಯಾರ್ಥಿಗಳು ಸಾಧನೆಯನ್ನು ಮರೆತು ಸುಖದ ಕಡೆ ವಾಲಿದರೆ ಜೀವನ ನಾಶವಾಗುತ್ತದೆ ಎಂದು ರಾಮಕೃಷ್ಣಾಶ್ರಮದ ಕಾರ್ಯದರ್ಶಿ ಶ್ರೀ ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್ ಹೇಳಿದರು.

ನಗರದ ಬಾಪೂಜಿ ಎಂ.ಬಿ.ಎ. ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 'ಪ್ರದ್ಯುತ್' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಬ್ರಹ್ಮಚರ್ಯ ಎಂದರೆ ಕೇವಲ ಲೈಂಗಿಕತೆಯಿಂದ ದೂರವಿರುವುದು ಎಂದಲ್ಲ. ಇಂದ್ರಿಯ ಸುಖಗಳನ್ನು ನಿಗ್ರಹಿಸಿ ಸಾಧನೆ ಮಾಡುವುದು ಎಂದರ್ಥ. ವಿದ್ಯಾರ್ಥಿ ದೆಸೆಯಲ್ಲಿ ಬ್ರಹ್ಮಚರ್ಯದಂತೆ ನಡೆದುಕೊಳ್ಳಬೇಕು ಎಂದು ತಿಳಿಸಿದರು.

ಕಾಲೇಜು ಹಂತದಲ್ಲಿ ಪೋಷಕರು ಹಾಗೂ ಕುಟುಂಬದ ಕಟ್ಟುಪಾಡುಗಳು ಸಡಿಲವಾಗಿರುತ್ತವೆ. ಈ ಹಂತದಲ್ಲಿ ವಿದ್ಯಾರ್ಥಿಗಳು ಇಂದ್ರಿಯಗಳ ಮೇಲೆ ಸ್ವಯಂ ನಿಯಂತ್ರಣ ಹಾಕಿಕೊಳ್ಳಬೇಕು. ಇಂದ್ರಿಯ ಸುಖಗಳನ್ನೇ ಬಯಸಿ, ದಾರಿ ತಪ್ಪಿದರೆ ಜೀವನವೇ ನಾಶವಾಗುತ್ತದೆ ಎಂದು ಎಚ್ಚರಿಸಿದರು.

ದೈಹಿಕವಾಗಿ, ಬೌದ್ಧಿಕವಾಗಿ ಹಾಗೂ ಅಧ್ಯಾತ್ಮಿಕವಾಗಿ ದುರ್ಬಲಗೊಳಿಸುವ ಯಾವುದನ್ನೇ ಆಗಲೀ ವಿಷದಂತೆ ತ್ಯಜಿಸಬೇಕು ಎಂದು ಸ್ವಾಮಿ ವಿವೇಕಾನಂದ ಹೇಳಿದ್ದರು.

ಯುವಕರು ಧೀರರಾಗಬೇಕು. ನಿರ್ಭೀತವಾಗಿರಬೇಕು, ಸ್ವಚ್ಛ ಹೃದಯದವರಾಗಿರಬೇಕು. ಇಂತಹ ಗುಣಗಳನ್ನು ಹೊಂದಿರುವವರಿಂದಲೇ ದೇಶದ ಭವಿಷ್ಯ ಕಟ್ಟಲು ಸಾಧ್ಯ ಎಂದು ವಿವೇಕಾನಂದರು ಹೇಳಿದ್ದರು ಎಂದು ಸ್ವಾಮಿ ತ್ಯಾಗೀಶ್ವರಾನಂದಜೀ ಮಹಾರಾಜ್ ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಆಜಾದ್ ನಗರ ವೃತ್ತದ ಸಿ.ಪಿ.ಐ. ಎಸ್. ಬಾಲಚಂದ್ರ ನಾಯಕ್, ಮಾದಕ ಹಾಗೂ ಮೊಬೈಲ್‌ಗಳ ಬಗ್ಗೆ ವಿದ್ಯಾರ್ಥಿಗಳು ಎಚ್ಚರವಾಗಿರಬೇಕು. ಮೊಬೈಲ್‌ಗಳೂ ಸಹ ಮಾದಕಂತೆ ವ್ಯಸನಕಾರಿಯಾಗುತ್ತಿವೆ ಎಂದರು.

ಮೊಬೈಲ್ ಹಾಗೂ ಮಾದಕ ವ್ಯಸನಗಳಿಗೆ ಸಿಲುಕಿದ ವಿದ್ಯಾರ್ಥಿಗಳು ಯಾವುದೇ ಸಾಧನೆ ಮಾಡುವುದಿರಲಿ, ಸಾಧನೆಯ ಬಗ್ಗೆ ಯೋಚಿಸಲಿಕ್ಕೂ ಸಾಧ್ಯವಾಗದು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ನೇರ ವಂಚನೆಗಿಂತ ಆನ್‌ಲೈನ್ ವಂಚನೆಗಳು ಹೆಚ್ಚಾಗುತ್ತಿವೆ. ಮೊದಲು ದೂರದ ದೇಶಗಳಿಂದ ವಂಚನೆ ನಡೆಯುತ್ತಿತ್ತು. ಈಗ ಹತ್ತಿರವಿರುವವರೇ ವಂಚನೆಯಲ್ಲಿ ತೊಡಗಿದ್ದಾರೆ. ಈ ಬಗ್ಗೆಯೂ ವಿದ್ಯಾರ್ಥಿಗಳು ಅರಿವು ಹೊಂದಬೇಕು ತಿಳಿಸಿದರು.

ಬಾಪೂಜಿ ಬಿ - ಸ್ಕೂಲ್ಸ್ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಅಶ್ವಿನಿ ಪ್ರಾರ್ಥಿಸಿದರು. ಲಾವಣ್ಯ ಸ್ವಾಗತಿಸಿದರು. ಅನುಷ ಪ್ರಾಸ್ತಾವಿಕವಾಗಿ ಮಾತನಾಡಿದರೆ, ಕೆ. ದಿವ್ಯ ನಿರೂಪಿಸಿದರು.

### ಯುವ ನಾಶಕ್ಕೆ ಡ್ರಗ್ಸ್ ಬಳಕೆ

ಯುವಕರೇ ದೇಶದ ಶಕ್ತಿಯಾಗಿದ್ದಾರೆ. ಹೀಗಾಗಿ ಯುವಕರನ್ನು ಗುರಿಯಾಗಿಟ್ಟುಕೊಂಡು ಶತ್ರು ದೇಶಗಳು ಮಾದಕ ಪೂರೈಕೆ ಮಾಡುತ್ತಿವೆ ಎಂದು ಆಜಾದ್ ನಗರ ವೃತ್ತದ ಸಿ.ಪಿ.ಐ. ಎಸ್. ಬಾಲಚಂದ್ರ ನಾಯಕ್ ಹೇಳಿದರು.

ಯುವಕರನ್ನು ಮಾದಕದಿಂದ ನಾಶಗೊಳಿಸಿದರೆ ಭಾರತದ ಆರ್ಥಿಕತೆ ಹಾಗೂ ಭವಿಷ್ಯ ನಾಶವಾಗುತ್ತದೆ. ಹೀಗಾಗಿ ಯುವಕರನ್ನು ಶತ್ರು ದೇಶಗಳು ಗುರಿಯಾಗಿಟ್ಟುಕೊಂಡಿವೆ. ಮಾದಕದ ಬಗ್ಗೆ ವಿದ್ಯಾರ್ಥಿಗಳು ಜಾಗೃತಿ ಹೊಂದುವ ಜೊತೆಗೆ, ಇತರರಲ್ಲೂ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

# ರಾಜ್ಯಗಳ ತೆರಿಗೆ ಪಾಲು ಉಳಿಸಲು ನಡೆಸಿದ ಸಂಚು ಬಯಲು : ಸಿಎಂ

ಬೆಂಗಳೂರು, ಜ. 19 - ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರಾಜ್ಯಗಳ ತೆರಿಗೆ ಪಾಲಿನ ಹಣವನ್ನು ಪ್ರಸ್ತಾವಿತ ಶೇಕಡ 42 ರಿಂದ ಶೇ.32ಕ್ಕೆ ಇಳಿಸಲು ನಡೆಸಿದ ಸಂಚು ಬಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಮುಖ್ಯಮಂತ್ರಿ, ರಾಜ್ಯಗಳ ಪರಿಸ್ಥಿತಿ ಏನೇ ಆದರೂ, ಕೇಂದ್ರ ಸರ್ಕಾರದ ಪಾಲಿಗೆ ಹೆಚ್ಚಿನ ತೆರಿಗೆ ಹಣ ಉಳಿಸಿಕೊಳ್ಳಬೇಕು ಎನ್ನುವ ಕುತಂತ್ರ ಫಲಿಸದೇ ಅನಿವಾರ್ಯವಾಗಿ ತಮ್ಮ ಅವಧಿಯ ಪ್ರಥಮ ಬಜೆಟ್ ಮಂಡನೆಗೆ 48 ಗಂಟೆಗಳ ಮುನ್ನ ಆಯವ್ಯಯವನ್ನು ತಿದ್ದಿ ಬರೆಯುವ ಕೆಲಸಕ್ಕೆ ಕೈಹಾಕಿದ್ದರು ಎನ್ನುವುದು ಜಗಜ್ಜಾಹೀರಾಗಿದೆ ಎಂದು ಟೀಕಿಸಿದ್ದಾರೆ.

ರಾಜ್ಯಗಳಿಗೆ ಹಂಚಿಕೆಯಾದ ಹಣವನ್ನು ಗಮನಾರ್ಹವಾಗಿ ಕಡಿತಗೊಳಿಸುವ ಏಕೈಕ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಸರ್ಕಾರ, ಭಾರತೀಯ ಹಣಕಾಸು ಆಯೋಗದೊಂದಿಗೆ ರಹಸ್ಯ ಮಾತುಕತೆಗಳಲ್ಲಿ 2014ರಿಂದ ತೊಡಗಿಸಿಕೊಂಡಿದ್ದರು ಎನ್ನುವುದು ಕಳವಳಕಾರಿ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇರಿಸಿರುವ ಭಾರತದ ರಾಜ್ಯಗಳ ಆರ್ಥಿಕ ಸ್ವಾಯತ್ತತೆಯನ್ನೇ ಬುಡಮೇಲು ಮಾಡುವಂತಹ ಕೇಂದ್ರ ಸರ್ಕಾರದ ಗೌಪ್ಯ ಅಜೆಂಡಾವನ್ನು ನೀತಿ ಆಯೋಗದ ಸಿಇಓ ಬಿ.ವಿ.ಆರ್. ಸುಬ್ರಮಣ್ಯಂ ಬಹಿರಂಗ ಪಡಿಸಿದ್ದಾರೆ ಎಂದು ಹೇಳಿದರು.

# ರಾಜ್ಯ ಮೀನುಗಾರಿಕೆ ಮಹಾಮಂಡಳಿ ಅಧ್ಯಕ್ಷರಾಗಿ ಕುಂದುವಾಡ ಮಂಜಪ್ಪ



ದಾವಣಗೆರೆ, ಜ.19- ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿ ಅಧ್ಯಕ್ಷರಾಗಿ ಹಳೇ ಕುಂದುವಾಡದ ಹೆಚ್. ಜಿ ಮಂಜಪ್ಪ ಅವರು ಮೈಸೂರಿನ ಮತ್ಸ್ಯ ಭವನದಲ್ಲಿ ಇಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ನಗರದಲ್ಲಿ ಇಂದು 'ಸುಸಿ' ಸಹಿ ಸಂಗ್ರಹ ಆಂದೋಲನ

ಇಂದು ಬೆಳಿಗ್ಗೆ 11 ಗಂಟೆಗೆ ಉಪ ವಿಭಾಗಾಧಿಕಾರಿಗಳ ಕಚೇರಿ ಎದುರು ಸೋಷಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ, ಕಮ್ಯುನಿಸ್ಟ್ (ಎಸ್.ಯು.ಸಿ.ಐ) ವತಿಯಿಂದ ಸಹಿ ಸಂಗ್ರಹ ಆಂದೋಲನ ಹಮ್ಮಿಕೊಳ್ಳಲಾಗಿದೆ. ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ, ಶಿಕ್ಷಣ ಖಾಸಗೀಕರಣ, ಮಹಿಳೆಯರ ಮೇಲೆ ದೌರ್ಜನ್ಯ, ರೈತರ ಹಾಗೂ ಕೃಷಿ ಕಾರ್ಮಿಕರಿಗಾಗಿ ತಂದಿರುವ ಕರಾಳ ಕಾಯ್ದೆಗಳು ಸೇರಿದಂತೆ ಸಮಸ್ಯೆಗಳ ವಿರುದ್ಧ ಈ ಆಂದೋಲನ ನಡೆಸಲಾಗುತ್ತಿದೆ ಎಂದು ಪಕ್ಷದ ಮುಖಂಡ ಪರಶುರಾಮ್ ತಿಳಿಸಿದ್ದಾರೆ.

# ಹರಿಹರದಲ್ಲಿ ಇಂದು ಅಹಿಂದ ಸಮಾವೇಶದ ಪೂರ್ವಭಾವಿ ಸಭೆ

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಮತ್ತು ಕರ್ನಾಟಕ ಹಿಂದುಳಿದ ಜಾತಿಗಳ ಒಕ್ಕೂಟದ ಸಹಯೋಗದೊಂದಿಗೆ ಚಿತ್ರದುರ್ಗ ನಗರದಲ್ಲಿ ದಿ 24 ರಂದು ನಡೆಯಲಿರುವ ಅಹಿಂದ ಸಮಾವೇಶದ ಅಂಗವಾಗಿ ನಗರದ ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಸಭೆಯನ್ನು ಕರೆಯಲಾಗಿದೆ ಎಂದು ಅಹಿಂದ ವರ್ಗದ ತಾಲ್ಲೂಕು ಅಧ್ಯಕ್ಷ ಗಣೇಶ್ ಕೆ ದುರ್ಗದ ವಕೀಲರು ತಿಳಿಸಿದ್ದಾರೆ.

# ರಮೇಶ್ ಜಾರಕಿಹೊಳಿಗೆ ಸಂಕಷ್ಟ: ಸಾಲ ಬಾಕಿ ಪ್ರಕರಣ ಸಿ.ಐ.ಡಿ.ಗೆ



ಬೆಂಗಳೂರು, ಜ.19 - ಬಿಜೆಪಿಯ ಹಿರಿಯ ನಾಯಕ ಹಾಗೂ ಶಾಸಕ ರಮೇಶ್ ಜಾರಕಿಹೊಳಿ ಮತ್ತೊಮ್ಮೆ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಇವರ ಒಡೆತನದಲ್ಲಿರುವ ಸೌಭಾಗ್ಯ ಲಕ್ಷ್ಮಿ ಶುಗರ್ಸ್ ಕಂಪನಿ ಸಾಲ ಪಡೆದು ಮರುಪಾವತಿ ಮಾಡದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಸರ್ಕಾರ ಸಿಐಡಿಗೆ ವಹಿಸಿದೆ.

ಜಾರಕಿಹೊಳಿ ಜೊತೆ ವಸಂತ್ ವಿ. ಪಾಟೀಲ್, ಶಂಕರ್ ಪಾವಟೆ ಸೇರಿದಂತೆ ಕಂಪನಿಯ ಐವರು ಪದಾಧಿಕಾರಿಗಳ ಮೇಲೆ ಎಫ್‌ಐಆರ್ ದಾಖಲಾಗಿದೆ. ಕಾರ್ಖಾನೆ ಸ್ಥಾಪನೆ, ವಿಸ್ತರಣೆ, ನಿರ್ವಹಣೆಗಾಗಿ ಈ ಸಂಸ್ಥೆ ಹೆಸರಿನಲ್ಲಿ 232.88 ಕೋಟಿ ರೂ. ಸಾಲವನ್ನು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಿಂದ ಪಡೆದಿದ್ದರು.

ಸಾಲದ ಹಣ ಮರುಪಾವತಿಸದೆ, 2023ರ ವೇಳೆಗೆ ಸಾಲ ಮತ್ತು ಬಡ್ಡಿ ಸೇರಿ 439.7 ಕೋಟಿ ರೂ. ಬಾಕಿ ಇದೆ.

ಮೋಸಮಾಡುವಉದ್ದೇಶದಿಂದಯಾವುದೇ ಮಾಹಿತಿ ನೀಡದೇ ಆಡಳಿತ ಮಂಡಳಿ ಹುದ್ದೆಗಳಿಂದ ರಮೇಶ್ ಸೇರಿದಂತೆ ಇತರರು ಹೊರಬಂದಿದ್ದಾರೆ. ಬ್ಯಾಂಕ್‌ನವರಿಗೆ ನಂಬಿಕೆ ದ್ರೋಹ ಮಾಡಿದ್ದಾರೆಂದು ಮ್ಯಾನೇಜರ್ ರಾಜಣ್ಣ ನಗರದ ಠಾಣೆಯೊಂದರಲ್ಲಿ ದೂರು ನೀಡಿದ್ದರು.

# ಶ್ರೀ ಜಿಹ್ವೇಶ್ವರ ಮಹಿಳಾ ಮಂಡಳಿಯಿಂದ ನಾಳೆ ಪುಟಾಣಿಗಳ 'ಕರಿಎರೆ'ಯುವ ಕಾರ್ಯಕ್ರಮ

ದಾವಣಗೆರೆ, ಜ.19- ನಗರದ ಸ್ವಕುಳಸಾಳಿ ಶ್ರೀ ಜಿಹ್ವೇಶ್ವರ ಮಹಿಳಾ ಮಂಡಳಿ ವತಿಯಿಂದ ನಾಡಿದ್ದು ದಿನಾಂಕ 21ರ ಭಾನುವಾರ ಸಂಜೆ 5 ಗಂಟೆಗೆ ಸಂಕ್ರಾಂತಿ ಹಬ್ಬದ ಪ್ರಯುಕ್ತ ಸಮಾಜದ ಐದು ವರ್ಷದ ಒಳಗಿನ ಮಕ್ಕಳಿಗೆ ಆಯುಷ್ಯ, ಆರೋಗ್ಯ, ಐಶ್ವರ್ಯ, ವಿದ್ಯೆ- ಬುದ್ಧಿ ಕೊಟ್ಟು ಕಾಪಾಡಲಿ ಎಂದು ಹರಸಿ ಆಶೀರ್ವದಿಸುವ 'ಕರಿಎರೆ'ಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ

ಸಮಾಜದ ಪುಟ್ಟ-ಪುಟ್ಟ, ಪುಟಾಣಿ ಮಕ್ಕಳಿಗೆ ರಾಮ, ಲಕ್ಷ್ಮಣ, ಸೀತೆ, ರಾಧೆ, ಕೃಷ್ಣ ಮುಂತಾದ ವೇಷಭೂಷಣದೊಂದಿಗೆ ಕರೆದುಕೊಂಡು ಬರಬೇಕು. ಅಲ್ಲದೇ ಮಹಿಳೆಯರಿಗೆಲ್ಲ ಅರಿಶಿಣ- ಕುಂಕುಮ, ಹೂವು ಕೊಟ್ಟು ಪರಸ್ಪರ ಎಳ್ಳು ಬೆಲ್ಲವನ್ನು ಹಂಚುವ ಕಾರ್ಯಕ್ರಮವೂ ಇರುತ್ತದೆ ಎಂದು ಮಹಿಳಾ ಮಂಡಳಿ ಕಾರ್ಯದರ್ಶಿ ಶ್ರೀಮತಿ ಸುಜಾತಾ ರೋಖಡೆ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಸಿಲ್ಕ್ ಇಂಡಿಯಾ ಮೇಳದ ಉದ್ಘಾಟನೆ

ಅಭಿವೃದ್ಧಿ ಸಂಸ್ಥೆಯನ್ನು ಭಾರತದಲ್ಲಿರುವ ಕುಶಲ-ಕರ್ಮಿಗಳು ಮತ್ತು ನೇಕಾರರ ಶ್ರೇಯೋಭಿವೃದ್ಧಿಗಾಗಿ ಮೈಸೂರಿನಲ್ಲಿ ಸ್ಥಾಪಿಸಲಾಗಿದ್ದು, ಮದುವೆ ಸಮಾರಂಭವನ್ನು ಗಮನದಲ್ಲಿಟ್ಟುಕೊಂಡು ಇಂದು ಮಧ್ಯಾಹ್ನ 12ಕ್ಕೆ ಸಿಲ್ಕ್ ಇಂಡಿಯಾ-2024 ಮೇಳವನ್ನು ಹೋಟೆಲ್ ಪೂಜಾ ಇಂಟರ್ ನ್ಯಾಶನಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳು 50 ಕ್ಕೂ ಹೆಚ್ಚಿನಮಳಿಗೆಗಳಲ್ಲಿಭಾಗವಹಿಸುತ್ತಿದ್ದು, ಇದೇ ದಿನಾಂಕ 28 ವರೆಗೆ ಮೇಳ ನಡೆಯಲಿದೆ.

# ನಗರದಲ್ಲಿ ಇಂದು

ದಾವಣಗೆರೆ, ಜ. 19- ಮಿಟ್ಲಕಟ್ಟೆ ಬಳಿ ನಿರ್ಮಾಣವಾಗಿರುವ ಸಿಎನ್‌ಜಿ ಸಿಲಿಂಡರ್ಸ್ ಹೈಡ್ರೋ ಟೆಸ್ಟಿಂಗ್ ಘಟಕ ನಾಳೆ ದಿನಾಂಕ ದಿನಾಂಕ 20 ರಂದು ಬೆಳಿಗ್ಗೆ 11 ಕ್ಕೆ ಉದ್ಘಾಟನೆಗೊಳ್ಳಲಿದೆ ಎಂದು ತಾಂತ್ರಿಕ ಸಲಹೆಗಾರ ಜ್ಞಾನಚಂದ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಎ.ಎಂ. ಯೋಗೇಶ್, ಪೆಸ್ಕೋದ ಆಹಿನ್ ನಂದಿ ಉದ್ಘಾಟನೆ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉಮಾ ಪ್ರಶಾಂತ್, ಜ್ಞಾನೇಂದ್ರ ಕುಮಾರ್, ಪ್ರಮುಂತೇಶ್ ಭಾಗವಹಿಸಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಬಿ.ಜೆ. ವಿಶ್ವನಾಥ್, ಎಂ.ವಿ. ರವಿಚಂದ್ರ, ಎನ್.ಹೆಚ್. ಮೌನೇಶ್ವರ, ಮನೋಜ್ ಗುಪ್ತ ಉಪಸ್ಥಿತರಿದ್ದರು.

# ಉತ್ಸವಾಂಭದೇವಿ, ಚೌಡೇಶ್ವರಿದೇವಿ, ಆದಿಶಕ್ತಿದೇವಿ ಜಾತ್ರಾ ಮಹೋತ್ಸವ

ದಾವಣಗೆರೆ, ಜ.19- ನಗರದ ವಸಂತ ರಸ್ತೆಯ ಹಾಲಸ್ವಾಮಿ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಭದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಆದಿಶಕ್ತಿದೇವಿ, ಶ್ರೀ ಗಣೇಶ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ 37ನೇ ವರ್ಷದ ಜಾತ್ರಾ ಕಾರ್ಯಕ್ರಮವು ಇದೇ ದಿನಾಂಕ 23 ರಿಂದ 25 ರವರೆಗೆ ನಡೆಯಲಿದೆ.

ಇದೇ ದಿನಾಂಕ 23 ನೇ ಮಂಗಳವಾರ ಬೆಳಿಗ್ಗೆ 7.30 ಕ್ಕೆ ಅಂದರೆ ಪೂಜೆ, ಧ್ವಜಾರೋಹಣ ನಡೆಯುವುದು. ದಿ. 24 ನೇ ಬುಧವಾರ ಬೆಳಗಿನ ಜಾವ 4.30 ಕ್ಕೆ ತಾಯಿಯವರಿಗೆ ರುದ್ರಾಭಿಷೇಕ ಹಾಗೂ ಮಾಂಗಲ್ಯ ಪೂಜೆ ನಡೆಯುವುದು. ದಿನಾಂಕ 25 ನೇ ಗುರುವಾರ ಬೆಳಗಿನ ಜಾವ 4.30 ಕ್ಕೆ ತಾಯಿ ಅವರಿಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಹಾಗೂ ಬೆಳಿಗ್ಗೆ 9.30 ರಿಂದ ಮುತ್ತೈದೆಯವರಿಗೆ ಉಡಿಅಕ್ಕಿ ಸೇವೆ ನಡೆಯುವುದು. ಮಧ್ಯಾಹ್ನ 12 ಗಂಟೆಗೆ ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ಮಾತೋಶ್ರೀ ಅವರ ಮೆರವಣಿಗೆ ನಡೆಯಲಿದೆ.

# ನಾಳೆ ಶಂಕರಮಠ ಶ್ರೀರಾಮ ಮಂದಿರದ ದೇವರ ಮೂರ್ತಿಗಳ ಶುದ್ಧೀಕರಣ

ದಾವಣಗೆರೆ, ಜ.19- ನಗರದ ಜಯದೇವ ಸರ್ಕಲ್ ಬಳಿ ಇರುವ ಶ್ರೀ ಶಂಕರಮಠದ ಆವರಣದಲ್ಲಿರುವ ಶ್ರೀರಾಮ, ಲಕ್ಷ್ಮಣ, ಸೀತೆ ಮತ್ತು ಆಂಜನೇಯ ಮೂರ್ತಿಗಳ ಶುದ್ಧೀಕರಣ ಕಾರ್ಯವು ನಾಡಿದ್ದು ದಿನಾಂಕ 21ರ ಭಾನುವಾರ ಬೆಳಿಗ್ಗೆ ಜರುಗಲಿದೆ. ನಂತರ ಧ್ವಜಾರೋಹಣ ಹಾಗೂ 7.30ಕ್ಕೆ ಉದ್ಘಾಟನೆ ನೆರವೇರಿಸಲಾಗುವುದು.

ಯೋಗ ಬಂಧುಗಳು ರಾಮನ ನಾಮಾವಳಿ, ಜೈಕಾರ ಹಾಗೂ ಭಜನೆಗಳಿಂದ ಪೂಜಾ ಕಾರ್ಯ ಮಾಡಲಾಗುವುದು.

ಶ್ರೀ ಶಂಕರ ಮಠದಲ್ಲಿ ಸುಮಾರು ವರ್ಷಗಳಿಂದ ಪೂಜಿಸಲ್ಪಡುತ್ತಿರುವ ಶ್ರೀರಾಮ ಮಂದಿರವನ್ನು ಶ್ರೀರಾಮ ಸೇವಾ ಸಮಿತಿಯ ಮುಖ್ಯಸ್ಥ ಹೆಚ್.ಎ.ಗಿರೀಶ್ ಮತ್ತು ಸವಿತಾ ದಂಪತಿಗಳು ತಮ್ಮ ತಂದೆ-ತಾಯಿಯ ಜ್ಞಾಪಕಾರ್ಥವಾಗಿ ಜೀರ್ಣೋದ್ಧಾರ ಸೇವೆ ಮಾಡಿದ್ದಾರೆ ಎಂದು ಅರ್ಚಕರಾದ ಪವನ್ ಭಟ್ರು ಮತ್ತು ಅಜೇಯ ಭಟ್ರು ತಿಳಿಸಿದ್ದಾರೆ.

# ಹರಿಹರದಲ್ಲಿ ನಾಳೆ ಸಮೂಹ ಗೀತೆ ಸ್ಪರ್ಧೆ

ಹರಿಹರ, ಜ.19- ಕರ್ನಾಟಕ ಸುಗಮ ಸಂಗೀತ ಪರಿಷತ್ ಹರಿಹರ ತಾಲ್ಲೂಕು ಘಟಕದ ವತಿಯಿಂದ ನಾಡಿದ್ದು ದಿನಾಂಕ 21ನೇ ಭಾನುವಾರ ಬೆಳಿಗ್ಗೆ 10 ಗಂಟೆಗೆ ಹರಿಹರದ ಗಿರಿಯಮ್ಮ ಕಾಂತಪ್ಪ ಶ್ರೇಷ್ಠಿ ಪ್ರೌಢಶಾಲಾ ಸಭಾಂಗಣದಲ್ಲಿ ರಾಷ್ಟ್ರಕವಿ ಕುವೆಂಪು ವಿರಚಿತ ಉಚಿತ ಸಮೂಹ ಗಾಯನ ಸ್ಪರ್ಧೆಯ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಅಶ್ವಿನಿ ಅರುಣಕುಮಾರ್ ತಿಳಿಸಿದ್ದಾರೆ.

# ಯುಯುಸಿಎಮ್‌ಎಸ್ ರದ್ದುಗೊಳಿಸಿ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ರಾಜ್ಯ ಸರ್ಕಾರಕ್ಕೆ ಎಐಡಿಎಸ್‌ಓ ಆಗ್ರಹ

ದಾವಣಗೆರೆ, ಜ.19- ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳು ಯು. ಯು. ಸಿ. ಎಂ. ಎಸ್ ತಂತ್ರಾಂಶದಿಂದ ಅನೇಕ ಸಮಸ್ಯೆಗಳಿಗೆ ತುತ್ತಾಗಿದ್ದಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಪರೀಕ್ಷಾ ಪ್ರವೇಶ ಪತ್ರ, ಪರೀಕ್ಷಾ ಫಲಿತಾಂಶ ಕೂಡ ಸರಿಯಾಗಿ ದೊರೆತಿಲ್ಲ. ಅಲ್ಲದೇ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಮೊದಲನೇ, ಎರಡನೇ ಸೆಮಿಸ್ಟರ್ ಫಲಿತಾಂಶವೂ ಪ್ರಕಟವಾಗಿಲ್ಲ. ಎಷ್ಟೋ ವಿದ್ಯಾರ್ಥಿಗಳು ಪೋರ್ಟಲ್ ನಲ್ಲಿ ಅಪ್ಲಿಕೇಶನ್ ಹಾಕಲು ತಿಳಿಯದೇ ಕಾಲೇಜು ಪ್ರವೇಶಾತಿಯಿಂದ ವಂಚಿತರಾಗಿದ್ದಾರೆ.

ಹೀಗಿದ್ದಾಗ, ರಾಜ್ಯ ಸರ್ಕಾರ ಇದರಿಂದಾಗಿರುವ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡು ತಾಂತ್ರಿಕ ಪೋರ್ಟಲ್ ಬದಲು ಪರ್ಯಾಯ ವ್ಯವಸ್ಥೆ ಮಾಡಬೇಕಿತ್ತು. ಆದರೆ ಹಲವಾರು ಗೊಂದಲಗಳಿರುವ ಯು. ಯು. ಸಿ. ಎಂ. ಎಸ್ ತಂತ್ರಾಶವನ್ನು ಅನುಷ್ಠಾನಗೊಳಿಸಲು ಶಿಕ್ಷಣ ಇಲಾಖೆಗೆ 15 ಕೋಟಿ ಹಣ ಬಿಡುಗಡೆ ಮಾಡಿರುವುದು ವಿದ್ಯಾರ್ಥಿ ವಿರೋಧಿ ನಿಲುವಾಗಿದೆ.

ಈ ಕೂಡಲೇ ರಾಜ್ಯ ಸರ್ಕಾರ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವಿದ್ಯಾರ್ಥಿಗಳ ಪರವಾಗಿ ನಿಲುವು ತೆಗೆದುಕೊಳ್ಳಬೇಕೆಂದು ರಾಜ್ಯ ಸಮಿತಿಯು ಆಗ್ರಹಿಸುತ್ತದೆ ಎಂದು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಬಜೆಟ್ ಪೂರ್ವ ಜನರ ಹಕ್ಕುತ್ತಾಯ ಚಳವಳಿ

ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ನೇತೃತ್ವದಲ್ಲಿ ಬಜೆಟ್ ಪೂರ್ವ ಜನರ ಹಕ್ಕೊತ್ತಾಯ ಚಳವಳಿಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಜಯದೇವ ಸರ್ಕಲ್ ಬಳಿ ನಡೆಸಲಾಗುವುದು ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ತಿಳಿಸಿದ್ದಾರೆ.

# ಪಠ್ಯದಲ್ಲಿ 'ಭಾರತ'ವೇ ಇರಲಿ

## 'ಇಂಡಿಯಾ' ಪರ ಬರೆದಿದ್ದ ಕೇರಳದ ಪತ್ರಕ್ಕೆ ನಕಾರ

ತಿರುವನಂತಪುರಂ, ಜಿ. 19 -ಪಠ್ಯಪುಸ್ತಕಗಳಲ್ಲಿ 'ಇಂಡಿಯಾ' ಎಂದಿರುವ ಕಡೆ 'ಭಾರತ' ಎಂದು ಬಳಸುವಂತೆ ಎನ್.ಸಿ.ಇ.ಆರ್.ಟಿ. ಸಮಿತಿ ಮಾಡಿದ ಶಿಫಾರಸ್ಸು ವಾಪಸ್ ಪಡೆಯುವಂತೆ ಕೇರಳ ಸರ್ಕಾರ ಮಾಡಿಕೊಂಡ ಮನವಿಯನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಳ್ಳಿ ಹಾಕಿದ್ದಾರೆ.

ಸಂವಿಧಾನದಲ್ಲಿ ಇಂಡಿಯಾ ಹಾಗೂ ಭಾರತ ಎರಡೂ ಹೆಸರುಗಳಿಗೆ ಮಾನ್ಯತೆ ಇದೆ ಎಂದು ಪ್ರಧಾನ್ ಅಭಿಪ್ರಾಯ ಪಟ್ಟಿದ್ದಾರೆ.

ಕೇರಳ ಶಿಕ್ಷಣ ಸಚಿವ ವಿ. ಶಿವನಕುಟ್ಟಿ ಅವರಿಗೆ ಬರೆದಿರುವ ಪತ್ರದಲ್ಲಿ ಸಚಿವರು ತಮ್ಮ ನಿಲುವು ತಿಳಿಸಿದ್ದು, ಸಂವಿಧಾನದಲ್ಲಿ ಇಂಡಿಯಾ ಹಾಗೂ ಭಾರತ ಎರಡೂ ಪದಗಳನ್ನು ಬಳಸಲಾಗಿದೆ ಎಂದಿದ್ದಾರೆ.

ಕಳೆದ ಅಕ್ಟೋಬರ್ ತಿಂಗಳಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಪ್ರಧಾನ್ ಅವರಿಗೆ ಪತ್ರ ಬರೆದಿದ್ದ ಶಿವನಕುಟ್ಟಿ, ಈ ವಿಷಯದಲ್ಲಿ ಮಧ್ಯ ಪ್ರವೇಶಿಸುವಂತೆ ಒತ್ತಾಯಿಸಿದ್ದರು.

ಶಿಕ್ಷಣ ವ್ಯವಸ್ಥೆ ಹಾಗೂ ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ ಇಂಡಿಯಾ ಪದವನ್ನು ಮುಂದುವರೆಸಬೇಕು. ಹಲವಾರು ಪೀಳಿಗೆಗಳಿಂದ ವಿದ್ಯಾರ್ಥಿಗಳು ಇಂಡಿಯಾ ಹೆಸರಿನಲ್ಲೇ ದೇಶದ ಸಮೃದ್ಧ ಇತಿಹಾಸ ಹಾಗೂ ಪರಂಪರೆ ಅಧ್ಯಯನ ಮಾಡುತ್ತಾ ಬಂದಿದ್ದಾರೆ ಎಂದು ಶಿವನಕುಟ್ಟಿ ಹೇಳಿದ್ದರು. ಭಾರತ ಬಳಕೆಯ ಬಗ್ಗೆ ಎನ್.ಸಿ.ಇ.ಆರ್.ಟಿ. ಮಾಡಿರುವ ಶಿಫಾರಸ್ಸುಗಳನ್ನು ಜಾರಿಗೆ ತರುವುದಿಲ್ಲ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದರು.

# ನಾಳೆ ನಗರದಿಂದ ಹರಿಹರೇಶ್ವರ ದೇವಸ್ಥಾನಕ್ಕೆ ಕಾಲ್ನಡಿಗೆ ಜಾಥಾ



ದಾವಣಗೆರೆ, ಜ. 19 - ಕುಂದುವಾಡ ಕೆರೆ ವಾಯು ವಿಹಾರ ಬಳಗದಿಂದ ನಾಡಿದ್ದು ದಿನಾಂಕ 21ರ ಭಾನುವಾರ ಹೊಸ ವರ್ಷದ ಪ್ರಯುಕ್ತ ದಾವಣಗೆರೆಯಿಂದ ಹರಿಹರದ ಹರಿಹರೇಶ್ವರ ದೇವಸ್ಥಾನಕ್ಕೆ ಕಾಲ್ನಡಿಗೆ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 5.30ಕ್ಕೆ ನಗರದ ಬಿಎಸ್‌ಎನ್‌ಎಲ್ ಸರ್ಕಲ್‌ನಿಂದ ಜಾಥಾ ಆರಂಭವಾಗಲಿದ್ದು, ಹರಿಹರದ ಹರಿಹರೇಶ್ವರ ದೇವಸ್ಥಾನದ ಆವರಣಕ್ಕೆ ತಲುಪಿ, ಅಲ್ಲಿ ಯೋಗ ಮತ್ತು ಧ್ಯಾನ ಶಿಬಿರವನ್ನು ಏರ್ಪಡಿಸಲಾಗಿದೆ.

ಕಾಲ್ನಡಿಗೆಯಲ್ಲಿ ಭಾಗವಹಿಸಿರುವಂತಹ ಎಲ್ಲರಿಗೂ ಬೆಳಗಿನ ಉಪಹಾರದ ವ್ಯವಸ್ಥೆಯು ಇದ್ದು, ಬಸ್ಸಿನ ವ್ಯವಸ್ಥೆಯನ್ನು ಸಹ ಮಾಡಲಾಗಿದೆ. ವಿವರಕ್ಕೆ ಬಳಗದ ಸಂಘಟಕ ಜೆ. ಈಶ್ವರ್‌ಸಿಂಗ್ ಕವಿತಾಳ್ (98441 27137, 89713 89102) ಅವರನ್ನು ಸಂಪರ್ಕಿಸಬಹುದಾಗಿದೆ.

Government of Karnataka
**Dist AYUSH Office, DAVANGERE-577002**
email: dao.davangere09@gmail. Ph:-08192-221129
No: DAOD/12/Medicine/ZP/2023-24 Dt: 12-01-2024


**SHORT'TERM E-TENDER FOR THE SUPPLY OF AYURVEDA MEDICINES TO DISTRICT AYUSH OFFICE, DAVANGERE FOR THE PERIOD FROM APPROVAL DATE TO ONE YEAR**

(1) Tender reference:- No: DAOD/12/Medicine/ZP/2023-24 (2) Date and time for receipt tender:-12-01-2024 (3) Date and time of Sample submission 18-01-2024 (4) Last Date for Uploading of Tender in KPPP platform on or be fore 22-01-2024 5.30 PM (5) EMD Reconciliation and Opening of Technical Bids:- 24-01-2024 11:00 AM (6) Opening Financial Bid:- Intimation will given to Tenderers (7) Place of opening of tenders:- District Ayush office, Davangere. (8) Address for communication:- District ayush officer, PRED office premises, p.b. road Davangere.
Name of the Ayurveda Medicines:- Ayurveda Medicines. APPROXIMATE VALUE (yearly):- Rs.40.00 Lakhs. EMD AMOUNT:- Rs.100000/-

ವಾಸಾಇ/ಡಿವಿಜಿ/499/ಕೆಸ್‌ಎಂಸಿಎ/2023–24
**Sd- District ayush officer, Davangere.**

**WANTED/ಕೆಲಸಕ್ಕೆ ಬೇಕಾಗಿದ್ದಾರೆ**
Wholesale ಔಷಧಿ ಅಂಗಡಿಗೆ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
Qualification : (SSSLC, PUC) English ಓದಲು ಬರಬೇಕು
Address : ಎ.ಕೆ. ಫಾರ್ಮ, ಹದಡಿ ರೋಡ್, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ.
ಫೋ : 88678 56784, 99643 75596

**ಕಾಣೆಯಾಗಿದ್ದಾರೆ**



ದಾವಣಗೆರೆ ಮೌನೇಶ್ವರ ಬಡಾವಣೆ, 60 ಅಡಿ ರಸ್ತೆ, ನಿಟ್ಟುವಳ್ಳಿ ವಾಸಿಯಾದ
**ಪರಶುರಾಮಪ್ಪ**
ತಂದೆ ಹಾಲಪ್ಪ, ವಯಸ್ಸು 56 ವರ್ಷ ಇವರು, ದಿನಾಂಕ : 15.01.2024ರ ಸೋಮವಾರ ಬೆಳಿಗ್ಗೆ 7ಗಂಟೆ ಸಮಯದಲ್ಲಿ ಮನೆಯಿಂದ ಹೊರಗೆ ಹೋದವರು, ಪುನಃ ಮನೆಗೆ ವಾಪಾಸ್ಸು ಬಂದಿರುವುದಿಲ್ಲ, ಇವರು ಹುಟ್ಟಿನಿಂದ ಮೂಕನಾಗಿದ್ದು, ಮಾತನಾಡಲು ಬರುವುದಿಲ್ಲ, ಸಾಧಾರಣ ಮೈಕಟ್ಟು, ದುಂಡುಮುಖ, ಕಪ್ಪು ಬಣ್ಣ, 5.5 ಅಡಿ ಎತ್ತರವಿದ್ದು, ನಶೆ ಬಣ್ಣದ ಚೌಕಳಿ ಅಂಗಿ, ನೀಲಿ ಬಣ್ಣದ ಲುಂಗಿ-ಪಂಚೆ ಧರಿಸಿರುತ್ತಾನೆ. ಎಡಗೈ ಮೇಲೆ ಪರಶುರಾಮಪ್ಪ ನಿಟ್ಟುವಳ್ಳಿ ಎಂದು ಹಚ್ಚೆ ಇರುತ್ತದೆ. ಇವರನ್ನು ಯಾರಾದರೂ ನೋಡಿದಲ್ಲಿ ಹತ್ತಿರದ ಕೆಟಿಜೆ ನಗರ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಮೊಬೈಲ್ ನಂಬರ್‌ಗಳಿಗಾಗಲೀ ತಿಳಿಸಬೇಕಾಗಿ ವಿನಂತಿ.
ಲೋಕೇಶ್ ಕೆ.ಹೆಚ್. ಮಾರುತಿ ಸದನ, ಮೌನೇಶ್ವರ ಬಡಾವಣೆ, 60 ಅಡಿ ರಸ್ತೆ, ನಿಟ್ಟುವಳ್ಳಿ, ದಾವಣಗೆರೆ.
**ಸಂಪರ್ಕಿಸಿ : 99642 62040, 98801 33248**

GM HALAMMA PU COLLEGE, DAVANAGERE


Exam Pattern: MCQ
40 Marks for Science
40 Marks for Maths
20 Marks for English

First Top 10 Students Get 80% Scholarship
Above 90% Students Get 50% Scholarship

ADMISSION cum SCHOLARSHIP TEST
Offline Test on 21-01-2024 (Sunday)
Time: 11.00 AM to 12.30 PM and 03.00 PM to 04.30 PM

Venue: GM Halamma PU College, GMIT Campus, P.B.Road, Davangere. M: 91411 58731, 91411 58732


# ಶಿಕ್ಷಕರಾಗಿರುವ ನನ್, ಪಾದ್ರಿಗಳ ಆದಾಯ ತೆರಿಗೆ ಬಗ್ಗೆ ಸುಪ್ರೀಂ ವಿಚಾರಣೆ



ನವದೆಹಲಿ, ಜ. 19 – ಸರ್ಕಾರದ ಅನುದಾನಿತ ಕ್ರಿಶ್ಚಿಯನ್ ಮಿಷನರಿ ಶಾಲೆಗಳಲ್ಲಿನ ನನ್ ಹಾಗೂ ಪಾದ್ರಿಗಳಿಗೆ ಆದಾಯ ತೆರಿಗೆ ವಿನಾಯಿತಿ ಇದೆಯೇ? ಎಂಬ ಬಗ್ಗೆ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಮತ್ತು ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ವಿಚಾರಣೆ ನಡೆಸಲಿದೆ.

ತಮಿಳುನಾಡು ಹಾಗೂ ಕೇರಳಗಳ ಹಲವಾರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹಿರಿಯ ವಕೀಲ ಅರವಿಂದ್ ದಾತಾರ್ ಅವರು ಅರ್ಜಿ ದಾಖಲಿಸಿದ್ದಾರೆ.

ಈ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಟಿ.ಡಿ.ಎಸ್. ಅನ್ವಯಿಸಬೇಕು ಎಂದು ಡಿಸೆಂಬರ್ 2014ರಂದು ಆದಾಯ ತೆರಿಗೆ ಇಲಾಖೆ ತಿಳಿಸಿತ್ತು.

ನನ್ ಹಾಗೂ ಪಾದ್ರಿಗಳು ವೈಯಕ್ತಿಕವಾಗಿ ವೇತನ ಪಡೆಯುತ್ತಿಲ್ಲ. ಈ ಹಣ ಶಿಕ್ಷಣ ಸಂಸ್ಥೆಗೆ ಹೋಗುತ್ತಿದೆ. ಹೀಗಾಗಿ ಆದಾಯ ತೆರಿಗೆ ಪಾವತಿಸಲಾಗದು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ.

ಮದ್ರಾಸ್ ಹಾಗೂ ಕೇರಳ ಹೈಕೋರ್ಟ್‌ಗಳು ನನ್ ಹಾಗೂ ಫಾದ್ರಿಗಳ ಅರ್ಜಿ ತಳ್ಳಿ ಹಾಕಿದ್ದವು. ನಂತರ ವಿಷಯ ಸುಪ್ರೀಂ ಕೋರ್ಟ್ ಬಳಿ ಬಂದಿದೆ.

## ಕರಾಟೆ: ಮುಹಮದ್ ಜಾಹಿದ್ ಆಯ್ಕೆ



ದಾವಣಗೆರೆ, ಜ.19 - ನಗರದ ಕರೂರು ಇಂಡಸ್ಟ್ರಿಯಲ್ ಏರಿಯಾದ ಲ್ಲಿರುವ ವಿಷನ್ ಇಂಟರ್ ನ್ಯಾಷನಲ್ ಸ್ಕೂಲ್‌ನ ವಿದ್ಯಾರ್ಥಿ ಮುಹಮದ್ ಜಾಹಿದ್ ಬೆಂಗಳೂರಿನಲ್ಲಿ ಜರುಗಿದ ಕರಾಟೆ ಸ್ಪರ್ಧೆಯಲ್ಲಿ ವಿಜೇತನಾಗಿ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ ಎಂದು ತಿಳಿಸಿರುವ ಶಾಲೆಯ ಮುಖ್ಯೋಪಾಧ್ಯಾಯರು ಶುಭ ಕೋರಿದ್ದಾರೆ.

## ಮಕ್ಕಳ ಪಾಲನಾ ಸಂಸ್ಥೆ ನೋಂದಣಿ ಕಡ್ಡಾಯ

ದಾವಣಗೆರೆ, ಜ.19- ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮಕ್ಕಳ ಪಾಲನ ಸಂಸ್ಥೆಗಳು ಕಡ್ಡಾಯವಾಗಿ ಬಾಲನ್ಯಾಯ ಕಾಯ್ದೆಯಡಿ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿಯಾದ ಸಂಸ್ಥೆಗಳು ಪ್ರತಿ 5ವರ್ಷಕ್ಕೊಮ್ಮೆ ನವೀಕರಣ ಮಾಡಿಸಿಕೊಳ್ಳಬೇಕು. ನೋಂದಣಿಯಾಗದ ಸಂಸ್ಥೆಗಳ ವಿರುದ್ದ ಕ್ರಮ ಕೈಗೊಳ್ಳಲಾಗುವುದು. ನೋಂದಣಿಯಾಗದಿರುವ ಮಕ್ಕಳ ಪಾಲನ ಸಂಸ್ಥೆಗಳ ಮಾಹಿತಿಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಗೆ ನೀಡಬೇಕು. ಮಾಹಿತಿಗಾಗಿ (9632962676, 9844198275) ಸಂಪರ್ಕಿಸಿ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ತಿಳಿಸಿದ್ದಾರೆ.






## ರಾಣೇಬೆನ್ನೂರು ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಗಂಗಾಪುರ, ಬೇವಿನಹಳ್ಳಿ, ಹರನಗಿರಿ, ಕುದರಿಹಾಳ, ಗುಡಗೂರ, ಮೈದೂರು, ಹುಲ್ಲತ್ತಿ ತಾಂಡಾ ಮತ್ತು ಎತ್ತಿನಹಳ್ಳಿ ಗ್ರಾಮಗಳಿಗೆ ವಿದ್ಯುತ್ ಇಂದು ಬೆಳಿಗ್ಗೆ 11 ರಿಂದ ಸಂಜೆ 6 ರವರೆಗೆ ಸರಬರಾಜು ಇರುವುದಿಲ್ಲ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 17.01.2024ರ ಬುಧವಾರ ಮಧ್ಯಾಹ್ನ ನಿಧನರಾದ ಭಜನಾ ಮಂಡಳಿ ಪ್ರಪ್ರಥಮ ಅಧ್ಯಕ್ಷರು ಮತ್ತು ಅಂಬರ್‌ಕರ್ ಪಂಪಣ್ಣ, ಜವಳಿ ವ್ಯಾಪಾರಿಗಳು ಕಾಳಿಕಾದೇವಿ ರಸ್ತೆ, ದಾವಣಗೆರೆ ಇದರ ಮಾಲೀಕರಾದ

**ಶ್ರೀ ಹ.ಭ.ಪ. ವಿರೂಪಣ್ಣ ಅಂಬರ್‌ಕರ್**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಇವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಮತ್ತು ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ದುಃಖತಪ್ತರು**

ಶ್ರೀ ಜಯಪ್ರಕಾಶ್ ಯು. ಅಂಬರ್‌ಕರ್, ಅಧ್ಯಕ್ಷರು
ಶ್ರೀ ಗುರುನಾಥ ಮಿರಜ್‌ಕರ್, ಉಪಾಧ್ಯಕ್ಷರು
ಶ್ರೀ ಅತೀತ್ ಅಂಬರ್‌ಕರ್, ಪ್ರಧಾನ ಕಾರ್ಯದರ್ಶಿ
ಶ್ರೀ ಪ್ರಶಾಂತ್ ಅಂಬರ್‌ಕರ್, ಕಾರ್ಯದರ್ಶಿ
ಶ್ರೀ ವಿರೂಪಣ್ಣ ಅಂಬರ್‌ಕರ್, ಕೋಶಾಧ್ಯಕ್ಷರು
ಸದಸ್ಯರುಗಳಾದ : ಶ್ರೀ ಮದನಕುಮಾರ ಅಂಬರ್‌ಕರ್, ಶ್ರೀ ಪ್ರಮೋದ ಅಂಬರ್‌ಕರ್, ಶ್ರೀ ರಮೇಶ ಅಂಬರ್‌ಕರ್, ಶ್ರೀ ಶಿವಪ್ರಸಾದ ಅಂಬರ್‌ಕರ್, ಶ್ರೀ ಅಭಿಷೇಕ ಅಂಬರ್‌ಕರ್, ಶ್ರೀ ಪ್ರಭುದೇವ ಅಂಬರ್‌ಕರ್, ಶ್ರೀ ನರೇಶ ಕಾಂಗೋಕರ್, ಶ್ರೀ ನಿಂಗೋಜಿರಾವ್ ಗುಜ್ಜರ್, ಶ್ರೀ ಅಶ್ವತ್ಥನಾರಾಯಣ ಖಿಮಿತ್ಕರ್, ಶ್ರೀಮತಿ ರತನ್‌ಕುಮಾರ್ ಖಿಮಿತ್‌ಕರ್

ಭಾವಸಾರ ಕ್ಷತ್ರಿಯ ವಿದ್ಯಾವರ್ಧಕ ಸಂಘ (ರಿ.448),
ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ – 2.

## ಸುಪ್ರೀಂ ನ್ಯಾಯಮೂರ್ತಿಯಾಗಿ ವರಾಳೆ ನೇಮಕಕ್ಕೆ ಶಿಫಾರಸ್ಸು



ನವದೆಹಲಿ, ಜ. 19 – ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ ಅವರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡಲು ಸುಪ್ರೀಂ ಕೋರ್ಟ್‌ನ ಕೊಲೀಜಿಯಂ ಶಿಫಾರಸ್ಸು ಮಾಡಿದೆ. ಇದೇ ವೇಳೆ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಅವರನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲು ಕೊಲೀಜಿಯಂ ಶಿಫಾರಸ್ಸು ಮಾಡಿದೆ.


ಆಶೂಜಿ
SILK SAREES | CHUDI
MEN'S WEAR | MEN'S ETHNIC WEAR
ಬೇಕಾಗಿದ್ದಾರೆ
WANTED
JOB DESIGNATIONS
- Cashiers
- Managers
- Salesman / Saleswoman
- Computer Operators
- Floor Managers

BOTH Male & Female
Salary : Negotiable
ESI, PF

Interested can call between 11:00am to 8:00pm on below number and book your appointment, while coming for appointment...
Get proper resume along with a photo attested & a xerox of your Adhaar Card.

#572, 6ನೇ ಮುಖ್ಯ ರಸ್ತೆ,
ರಾಮ್ & ಕೋ ಸರ್ಕಲ್ ಹತ್ತಿರ,
ಚರ್ಚ್ ರಸ್ತೆ, ಪಿ.ಜೆ. ಬಡಾವಣೆ,
ದಾವಣಗೆರೆ - 577001
ಮೊ. 96865 77166






ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ





ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

**ಸಮಾಜ ಸುಧಾರಣೆಯ ಮಹಾನಾಯಕರ ಶ್ರೇಷ್ಠ ಮೌಲ್ಯಗಳ ಮರುಸ್ಥಾಪನೆ**



ಶತ ಶತಮಾನಗಳ ಹಿಂದೆ ಜಾತಿ ರಹಿತ, ತಾರತಮ್ಯ ರಹಿತ ಸಮಾಜ ರಚನೆಗಾಗಿ ಶ್ರಮಿಸಿದ ದಾರ್ಶನಿಕರಾದ **ಬಸವಣ್ಣನವರು** ಮತ್ತು **ಅಲ್ಲಮ ಪ್ರಭುಗಳು** ಹಾಗೂ ಬ್ರಿಟೀಷರ ವಿರುದ್ಧ ವಿರೋಚಿತ ಹೋರಾಟ ನಡೆಸಿದ **ವೀರ ವನಿತೆ ರಾಣಿ ಚನ್ನಮ್ಮ** ಅವರ ಮೌಲ್ಯಾದರ್ಶಗಳನ್ನು ಮರು ಸ್ಥಾಪಿಸುವ ದಿಶೆಯತ್ತ ನಮ್ಮ ಸರ್ಕಾರವು ಮುನ್ನಡೆಯುತ್ತಿದೆ.

– ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು

**ಸಚಿವ ಸಂಪುಟದ ಐತಿಹಾಸಿಕ ನಿರ್ಣಯಗಳು**

- ಇಡೀ ಜಗತ್ತಿಗೆ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಚಿಂತನೆಗಳಿಗೆ ಹೊಸ ದಿಕ್ಕನ್ನು ತೋರಿಸಿದ, ವಚನ ಚಳವಳಿಯ ನಾಯಕತ್ವವನ್ನು ವಹಿಸಿದ್ದ **ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರೆಂದು** ಘೋಷಣೆ
- ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮೊಟ್ಟ ಮೊದಲ ಬಾರಿಗೆ ಸ್ಥಾಪಿಸಿದ **ಅಲ್ಲಮ ಪ್ರಭುಗಳ** ಹೆಸರನ್ನು **ಶಿವಮೊಗ್ಗದ ಹಳೆ ಜೈಲು ಆವರಣಕ್ಕೆ** ನಾಮಕರಣ
- ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕನ್ನು **ಚನ್ನಮ್ಮನ ಕಿತ್ತೂರು** ಎಂದು **ಮರು ನಾಮಕರಣ**

**ನುಡಿದಂತೆ ನಡೆದಿದ್ದೇವೆ...**

ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹಜ್ಯೋತಿ – ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ – ಬಡವರಿಗೆ ಪ್ರತಿ ತಿಂಗಳು 10 kg – 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170
ಗೃಹಲಕ್ಷ್ಮಿ – ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ